SEVA BHARATHI
सेवा ही परमो धर्मः

ಜೂನ್ - 2026
ಸಂಚಿಕೆ - 06
ಸಂಪುಟ - 07

ಮಾಸಿಕ e - ನ್ಯೂಸ್ ಲೆಟರ್

# ಸೇವಾಪಥ

ಸೇವಾಭಾರತಿ (ರಿ.), ಬೆಳ್ತಂಗಡಿ ತಾ||
(ರಾಜ್ಯ ಪ್ರಶಸ್ತಿ ಪುರಸ್ಕೃತ ಸೇವಾ ಸಂಸ್ಥೆ -2022)



ಪ್ರಧಾನ ಕಚೇರಿ : ಸೇವಾನಿಕೇತನ, ಕನ್ಯಾಡಿ - II ಧರ್ಮಸ್ಥಳ ಅಂಚೆ, ಬೆಳ್ತಂಗಡಿ ತಾಲೂಕು, ದ.ಕ - 574216




## ಫ್ಯಾಬ್ರಿಕ್ ಪೈಂಟ್ ಡಿಸೈನ್ ಉಚಿತ ತರಬೇತಿ ಶಿಬಿರದ ಉದ್ಘಾಟನೆ

## ಕನ್ಯಾಡಿ ಸೇವಾಭಾರತಿಯಿಂದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಾದ ಶ್ರೀ ಯು.ಟಿ. ಖಾದರ್ ರವರ ಭೇಟಿ.

## ಸೇವಾಧಾಮ - ಸೇವಾನಿಕೇತನಕ್ಕೆ ಸಕ್ಷಮ ತಂಡದ ಭೇಟಿ

## ಬೆನ್ನುಹುರಿ ಅಪಘಾತದ ಬಳಿಕ 19 ವರ್ಷಗಳ ಹೋರಾಟ ನಡೆಸಿ ಸ್ವಾವಲಂಬಿ ಬದುಕು ಕಟ್ಟಿಕೊಂಡ ಶಿರಸಿಯ ಶ್ರೀ ಕೃಷ್ಣ ಪೂಜಾರಿ

ಯಶೋಗಾಥೆ

## ನಮ್ಮಿಂದಿಷ್ಟು

**ತಮಗೆಲ್ಲರಿಗೂ ನಮಸ್ಕಾರಗಳು**

ಈ ಜೂನ್ ತಿಂಗಳು ಮಹಿಳೆಯರ ಆರ್ಥಿಕ ಸಬಲೀಕರಣಕ್ಕಾಗಿ ಸಬಲಿನಿ ಯೋಜನೆಯಡಿ ಒಂದು ತಿಂಗಳ ಉಚಿತ ಫ್ಯಾಬ್ರಿಕ್ ಡಿಸೈನ್ ತರಬೇತಿ ಶಿಬಿರವು ಪ್ರಾರಂಭಗೊಂಡಿತು. ಸುಮಾರು 20 ಜನಕ್ಕೂ ಮೇಲ್ಪಟ್ಟು ನೋಂದಾಯಿಸಿಕೊಂಡು ತರಬೇತು ಶಿಬಿರದಲ್ಲಿ ಭಾಗವಹಿಸುತ್ತಿರುವ ಆಸಕ್ತ ಫಲಾನುಭವಿಗಳ ಉತ್ಸಾಹ ನೋಡುವಾಗ ಇದಕ್ಕೂ ಒಂದು ಭವಿಷ್ಯವಿದೆ ಅನ್ನಿಸಿತು. ಈ ಶಿಬಿರದ ತರಬೇತುದಾರರಾದ ಶ್ರೀಮತಿ ಭವ್ಯಶ್ರೀ ಕೀರ್ತಿರಾಜ್ ಅವರು JCI ಮಹಿಳಾ ಘಟಕದ ವತಿಯಿಂದ ರಕ್ತದಾನದ ಮಹತ್ವದ ಬಗ್ಗೆ ಒಂದು ಮಾಹಿತಿ ಕಾರ್ಯಾಗಾರವನ್ನು ಶಿಬಿರದ ಸಂದರ್ಭದಲ್ಲಿ ಏರ್ಪಾಟು ಮಾಡಿದ್ದರು. ಅವರ ಆಶಯಕ್ಕೆ ತಕ್ಕಂತೆ ರಕ್ತದಾನದ ಮಹತ್ವದ ಬಗ್ಗೆ ಒಂದಿಷ್ಟು ಮಾಹಿತಿ ನೀಡುವ ಮತ್ತು ಅದೇ ವೇದಿಕೆಯಲ್ಲಿ 46 ಬಾರಿ ಮತ್ತು 30 ಬಾರಿ ರಕ್ತದಾನ ಮಾಡಿದ ರಕ್ತದಾನಿಗಳನ್ನು ಗೌರವಿಸುವ ಅವಕಾಶವು ದೊರಕಿತ್ತು. ಒಟ್ಟಿನಲ್ಲಿ ಶಿಬಿರಾರ್ಥಿಗಳಿಗೆ ಭರಪೂರ ಮಾಹಿತಿಯು ಇದೇ ಶಿಬಿರದಲ್ಲಿ ದೊರಕುವಂತಾಯಿತು.

ದಿವ್ಯಾಂಗರ ಸರ್ವತೋಮುಖ ಅಭಿವೃದ್ಧಿಗೆ ಮುಡಿಪಾಗಿರುವ ರಾಷ್ಟ್ರೀಯ ಸಂಘಟನೆಯಾದ ಸಕ್ಷಮದ ಒಂದು ಯೋಜನೆ ದಿವ್ಯಾಂಗ ಸೇವಾ ಕೇಂದ್ರ( DSK) ರಚಿಸುವ ಬಗ್ಗೆ ಮತ್ತು ಸಕ್ಷಮದ ಸಂಸ್ಥಾಪನಾ ದಿನಾಚರಣೆ ಬಗ್ಗೆ ಮಾಹಿತಿ ನೀಡುವ ಸಲುವಾಗಿ ಹಾಗೂ ಜಿಲ್ಲಾಮಟ್ಟದ ಪ್ರಮುಖರು ಭೇಟಿ ಮಾಡಿದ್ದರು. ಈ ಸಂದರ್ಭದಲ್ಲಿ ಬೆಳ್ತಂಗಡಿ, ವೇಣೂರು, ಉಜಿರೆ ತಾಲೂಕುಗಳ ಸಂಘದ ಪ್ರಮುಖರು ಉಪಸ್ಥಿತರಿದ್ದರು.

ಪ್ರತಿಯೊಬ್ಬ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಕಾನೂನಿನಂತೆ ಪ್ರತಿ ಸಮುದಾಯ ಕೇಂದ್ರಗಳಲ್ಲಿ (PHC, CHC, Government Hospital) ಅಗತ್ಯವಿರುವ ಸೆಲ್ಫ್ ಕೇರ್ ಹಾಗೂ ಮೆಡಿಕಲ್ ಕಿಟ್ ಗಳನ್ನು ಯಾವುದೇ ವಿಳಂಬವಿಲ್ಲದೆ ಸುಲಲಿತವಾಗಿ ಸಿಗುವಂತೆ ಕ್ರಮ ಕೈಗೊಳ್ಳಲು ಆರೋಗ್ಯ ಸಚಿವರಿಗೆ ವಿನಂತಿ ಮಾಡಲಾಯಿತು. ಇನ್ನೂ ಕೂಡಾ ಇದರ ಬಗ್ಗೆ ಹಲವಾರು PHC ಗಳಲ್ಲಿ ಸಿಗದಿರುವುದು ದುಃಖಕರ ವಿಷಯವಾಗಿದೆ.

ಧ್ವನಿ ಫೌಂಡೇಶನ್ ನ ಕಾರ್ಯಾಗಾರದಲ್ಲಿ ಭಾಗವಹಿಸಲಾಯಿತು. Leadership Transition ಬಗ್ಗೆ Founders ಗಳಿಗಾಗಿ ಇರುವ ಶಿಬಿರದಲ್ಲಿ ಆಯ್ಕೆಗೊಂಡ 20 ಸ್ವಯಂಸೇವಾ ಸಂಸ್ಥೆಗಳ ಸಂಸ್ಥಾಪಕರು ಭಾಗವಹಿಸಿದ್ದರು. 2nd Line Leadership ಬೆಳೆಸುವ ಉದ್ದೇಶದಿಂದ ನಡೆಯುತ್ತಿರುವ ಈ ಶಿಬಿರವು ಸಂಸ್ಥೆಗಳ ನಿರಂತರತೆಯೆಡೆಗೆ ಕೊಂಡೊಯ್ಯಲು ಭವಿಷ್ಯತ್ ನಲ್ಲಿ ಸಹಕಾರಿಯಾಗಲಿದೆ.

**ಒಟ್ಟಿನಲ್ಲಿ ಸೇವಾ ಕಾರ್ಯ ನಿರಂತರವಾಗಿದೆ**



**ಸೇವಾ ಹಿ ಪರಮೋ ಧರ್ಮಃ**

ವಂದನೆಗಳೊಂದಿಗೆ

**ತಮ್ಮವ**

**ಕೆ. ವಿನಾಯಕ ರಾವ್**

## ಮೇ ತಿಂಗಳ ಸೇವಾಪಥ ಬಿಡುಗಡೆ



**ಮೇ ತಿಂಗಳ ಸೇವಾಭಾರತಿಯ ಸೇವಾಕಾರ್ಯಗಳ ಈ - ನ್ಯೂಸ್ ಲೆಟರ್ 'ಸೇವಾಪಥ' ವನ್ನು ಸಂಸ್ಥೆಯ ಹಿತೈಷಿ ಹಾಗೂ ದಾನಿ ಶ್ರೀಮತಿ ರವಿಜಾ ಎಸ್ ರಾವ್ ಕನ್ಯಾಡಿ ಇವರು ಬಿಡುಗಡೆಗೊಳಿಸಿರುತ್ತಾರೆ.**


### ನಮ್ಮ ವಿಳಾಸ :

**ಪ್ರಧಾನ ಕಚೇರಿ**

**ಸೇವಾನಿಕೇತನ, ಕನ್ಯಾಡಿ - II ,ಧರ್ಮಸ್ಥಳ ಗ್ರಾಮ, ಬೆಳ್ತಂಗಡಿ ತಾಲೂಕು**
**574 216 : 99454 91241**

### ಸೇವಾ ಕೇಂದ್ರ :

**ಸೇವಾಧಾಮ ಸೌತಡ್ಕ**

**(ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಪುನಶ್ಚೇತನ ಕೇಂದ್ರ)**
**ಸೌತಡ್ಕ ಶ್ರೀ ಮಹಾಗಣಪತಿ ದೇವಸ್ಥಾನದ ಬಳಿ ಕೊಕ್ಕಡ ಗ್ರಾಮ**
**574 198 : 94482 54888**

**ಸೇವಾಧಾಮ ಬೈಂದೂರು**

**(ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಒತ್ತಡ ಗಾಯ ನಿರ್ವಹಣೆ ಮತ್ತು ಪುನಶ್ಚೇತನ ಕೇಂದ್ರ) ಹೇನಬೇರು ಬೈಂದೂರು, ಪಡುವರಿ ಅಂಚೆ ಮತ್ತು ಗ್ರಾಮ, ಬೈಂದೂರು ತಾಲೂಕು, ಉಡುಪಿ ಜಿಲ್ಲೆ - 576214**



### ನಮ್ಮ ತಂಡ :

| | | |
|---|---|---|
| ಶ್ರೀ ಕೆ. ವಿನಾಯಕ ರಾವ್ | - | ಅಧ್ಯಕ್ಷರು |
| ಶ್ರೀ ಕೆ. ಬಾಲಕೃಷ್ಣ | - | ಉಪಾಧ್ಯಕ್ಷರು |
| ಶ್ರೀ ವಿಷ್ಣುಪ್ರಸಾದ್ ತೆಂಕಿಲ್ಲಾಯ | - | ಕಾರ್ಯದರ್ಶಿ |
| ಶ್ರೀ ಜಯರಾಜ್ ಸಾಲ್ಯಾನ್ | - | ಖಜಾಂಚಿ |
| ಶ್ರೀಮತಿ ಸ್ವರ್ಣಗೌರಿ | - | ಟ್ರಸ್ಟಿ |
| ಶ್ರೀ ಕೆ. ಯು. ಗಿರೀಶ್ ರಾವ್ | - | ಟ್ರಸ್ಟಿ |
| ಶ್ರೀ ಪೃಥ್ವೀಶ | - | ಟ್ರಸ್ಟಿ |

### ಸಲಹಾ ಮಂಡಳಿ :

ಶ್ರೀ CA ಗುಜ್ಜಾಡಿ ಪ್ರಭಾಕರ ನರಸಿಂಹ ನಾಯಕ್
ಡಾ. ಎ. ಜಯಕುಮಾರ್ ಶೆಟ್ಟಿ
ಶ್ರೀ ಸುಮಂತ್ ಕುಮಾರ್ ಜೈನ್

### ಸಂಚಾಲಕರು :

| | | |
|---|---|---|
| ಶ್ರೀ ಕೆ. ಪುರಂದರ ರಾವ್ | - | ಸೇವಾಧಾಮ |
| ಶ್ರೀಮತಿ ಮಮತಾ ಬೊಳ್ಳ | - | ಸಬಲಿನಿ |
| ಶ್ರೀ ಅಖಿಲೇಶ್ ಶೆಟ್ಟಿ, ನೇತ್ರಾವತಿ | - | ಆರೋಗ್ಯಮ್ |

# ಫ್ಯಾಬ್ರಿಕ್ ಪೈಂಟ್ ಡಿಸೈನ್ ಉಚಿತ ತರಬೇತಿ ಶಿಬಿರದ ಉದ್ಘಾಟನೆ







**ಕನ್ಯಾಡಿ (ಜೂನ್.15):** ಸೇವಾಭಾರತಿ (ರಿ.), ಕನ್ಯಾಡಿ ಇದರ ನೇತೃತ್ವದಲ್ಲಿ ಸಬಲಿನಿ ಯೋಜನೆಯಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ (ನಿ.), ಧರ್ಮಸ್ಥಳ, ಶ್ರೀ ದುರ್ಗಾ ಮಾತೃ ಮಂಡಳಿ ಕನ್ಯಾಡಿ ಇವುಗಳ ಸಹಭಾಗಿತ್ವದಲ್ಲಿ ಮಹಿಳೆಯರಿಗಾಗಿ 1 ತಿಂಗಳ ಫ್ಯಾಬ್ರಿಕ್ ಪೈಂಟ್ ಡಿಸೈನ್ ಉಚಿತ ತರಬೇತಿ ಶಿಬಿರದ ಉದ್ಘಾಟನಾ ಸಮಾರಂಭವು ಜೂನ್ 15 ರಂದು ಕನ್ಯಾಡಿ ಸೇವಾನಿಕೇತನದಲ್ಲಿ ನಡೆಯಿತು.

ಶಿಬಿರದ ಉದ್ಘಾಟನಾ ಸಮಾರಂಭದಲ್ಲಿ ಧರ್ಮಸ್ಥಳ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ(ನಿ.), ನಿರ್ದೇಶಕರಾದ ಶ್ರೀ ನೀಲಕಂಠ ಶೆಟ್ಟಿಯವರು ಶಿಬಿರಕ್ಕೆ ಚಾಲನೆ ನೀಡಿ, ಫ್ಯಾಬ್ರಿಕ್ ಪೈಂಟ್ ಡಿಸೈನ್ ಎಂಬುದು ಕೇವಲ ಒಂದು ಕಲೆ ಮಾತ್ರವಲ್ಲ, ಅದು ಸ್ವಯಂ ಉದ್ಯೋಗ ಮತ್ತು ಆರ್ಥಿಕ ಸಬಲೀಕರಣದ ಉತ್ತಮ ಅವಕಾಶವಾಗಿದೆ. ಈ ತರಬೇತಿಯ ಮೂಲಕ ನೀವು ಹೊಸ ಕೌಶಲ್ಯಗಳನ್ನು ಕಲಿತು ನಿಮ್ಮ ಪ್ರತಿಭೆಯನ್ನು ಅಭಿವೃದ್ಧಿಪಡಿಸಿಕೊಳ್ಳುವ ಅವಕಾಶವನ್ನು ಪಡೆದುಕೊಳ್ಳಿ ಎಂದು ಶುಭಹಾರೈಸಿದರು.

ಸೇವಾಭಾರತಿ ಅಧ್ಯಕ್ಷರಾದ ಹಾಗೂ ಸೇವಾಧಾಮ ಸಂಸ್ಥಾಪಕರಾದ ಶ್ರೀ ವಿನಾಯಕ ರಾವ್ ರವರು ಪ್ರಾಸ್ತಾವಿಕ ನುಡಿಗಳನ್ನಾಡಿ, ಯಶಸ್ಸು ಸಾಧಿಸಲು ದೊಡ್ಡ ಅವಕಾಶಗಳೇ ಬೇಕೆಂದಿಲ್ಲ, ಕಲಿಯುವ ಮನಸ್ಸು ಮತ್ತು ಹೊಸ ವಿಷಯಗಳನ್ನು ತಿಳಿದುಕೊಳ್ಳುವ ಆಸಕ್ತಿ ಇದ್ದರೆ ಸಾಕು. ಕಲಿಕೆಯ ಹಂಬಲ ಇರುವ ವ್ಯಕ್ತಿಗೆ ಯಾವುದೇ ಕ್ಷೇತ್ರ ಕಷ್ಟವಾಗುವುದಿಲ್ಲ. ಇಂತಹ ತರಬೇತಿಗಳು ನಮ್ಮ ಪ್ರತಿಭೆಯನ್ನು ಗುರುತಿಸಲು, ಅದನ್ನು ಬೆಳೆಸಿಕೊಳ್ಳಲು ಹಾಗೂ ಜೀವನದಲ್ಲಿ ಹೊಸ ಅವಕಾಶಗಳನ್ನು ಸೃಷ್ಟಿಸಿಕೊಳ್ಳಲು ನೆರವಾಗುತ್ತವೆ. ಆದ್ದರಿಂದ ಈ ತರಬೇತಿಯನ್ನು ಒಂದು ಅವಕಾಶವಾಗಿ ಸ್ವೀಕರಿಸಿ, ಪ್ರತಿಯೊಬ್ಬರೂ ಇದರ ಸಂಪೂರ್ಣ ಪ್ರಯೋಜನವನ್ನು ಪಡೆದುಕೊಳ್ಳಿ ಎಂದು ನುಡಿದರು.

ಮಂಗಳೂರು ವಿಭಾಗದ ರಾ. ಸ್ವ. ಸಂಘದ ಘುಮಂತು ಕಾರ್ಯ ವಿಭಾಗ ಪ್ರಮುಖರಾದ ಶ್ರೀ ಸುದರ್ಶನ್ ಕೆ ವಿ, ಉದ್ಯಮಿ ಶ್ರೀಮತಿ ಸ್ವಾತಿ ವಿಶ್ವಜಿತ್, ಕನ್ಯಾಡಿ ಶ್ರೀ ದುರ್ಗಾಮಾತೃ ಮಂಡಳಿ ಅಧ್ಯಕ್ಷರಾದ ಶ್ರೀಮತಿ ಮಮತಾ ಬಿ, ಫ್ಯಾಷನ್ ಡಿಸೈನರ್ ಮತ್ತು ತರಬೇತುದಾರರಾದ ಶ್ರೀಮತಿ ಭವ್ಯಶ್ರೀ ಕೀರ್ತಿರಾಜ್ ರವರು ವೇದಿಕೆಯಲ್ಲಿ ಉಪಸ್ಥಿತರಿದ್ದರು

ಶಿಬಿರದಲ್ಲಿ ಒಟ್ಟು 20 ಮಂದಿ ಮಹಿಳಾ ಶಿಬಿರಾರ್ಥಿಗಳು ಭಾಗವಹಿಸಿದ್ದರು. ಕನ್ಯಾಡಿ ಶ್ರೀ ದುರ್ಗಾಮಾತೃ ಮಂಡಳಿಯ ಸದಸ್ಯರಾದ ಶ್ರೀಮತಿ ಸವಿತಾ ಎಂ ರಾವ್ ಸ್ವಾಗತಿಸಿ, ಕಾರ್ಯದರ್ಶಿ ಶ್ರೀಮತಿ ಚಂದ್ರಾವತಿ ನಿರೂಪಿಸಿ, ಸೇವಾಭಾರತಿ ಡಾಕ್ಯುಮೆಂಟೇಷನ್ ಮಾನಿಟರಿಂಗ್ ಮತ್ತು ಇವೆಲ್ಯೂಷನ್ ಕಾರ್ಡಿನೇಟರ್ ಕು. ಸುಮ ಧನ್ಯವಾದವಿತ್ತರು

# ಸೇವಾಧಾಮ - ಸೇವಾನಿಕೇತನಕ್ಕೆ ಪ್ರಮುಖರ ಭೇಟಿ





**ಕನ್ಯಾಡಿ (ಜೂನ್ 13):** ಸೇವಾಭಾರತಿ ಕರ್ನಾಟಕ ಪ್ರಾಂತ ಸಹ ಸಂಯೋಜಕರಾದ ಶ್ರೀ ರಾಜೀವ ಹಾಗೂ ರಾಷ್ಟ್ರೀಯ ಸೇವಾಭಾರತಿಯ ಮಂಗಳೂರು ವಿಭಾಗ ಸಂಘಟನಾ ಕಾರ್ಯದರ್ಶಿ ಶ್ರೀ ಚಂದ್ರಶೇಖರ ರವರು ಸೇವಾಭಾರತಿ ಕನ್ಯಾಡಿ ಇದರ ಪ್ರಧಾನ ಕಾರ್ಯಾಲಯ ಸೇವಾನಿಕೇತನಕ್ಕೆ ಹಾಗೂ ಸೌತಡ್ಕ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರ ಸೇವಾಧಾಮಕ್ಕೆ ಜೂನ್ 13 ರಂದು ಭೇಟಿ ನೀಡಿದರು. ಸಂಸ್ಥೆಯ ಪ್ರಸಕ್ತ ಸೇವಾಕಾರ್ಯ ಹಾಗೂ ಯೋಜನೆಗಳ ಬಗ್ಗೆ ಮಾಹಿತಿ ಪಡೆದರು. ಈ ಸಂದರ್ಭದಲ್ಲಿ ಸಿಬ್ಬಂದಿ ವರ್ಗದವರು, ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರು, ಆರೈಕೆದಾರರು ಉಪಸ್ಥಿತರಿದ್ದರು.

## ಕನ್ಯಾಡಿ ಸೇವಾಭಾರತಿಯಿಂದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಾದ ಶ್ರೀ ಯು.ಟಿ. ಖಾದರ್ ರವರ ಭೇಟಿ.



**ಮಂಗಳೂರು (ಜೂ. 23):** ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಾದ ಶ್ರೀ ಯು.ಟಿ. ಖಾದರ್ ರವರನ್ನು ಜೂನ್ 23 ರಂದು ಸೇವಾಭಾರತಿ ತಂಡದಿಂದ ಭೇಟಿ ಮಾಡಲಾಯಿತು.

ಈ ಸಂದರ್ಭದಲ್ಲಿ ಸೇವಾಭಾರತಿಯ ಹಿರಿಯ ಪ್ರಬಂಧಕರಾದ ಶ್ರೀ ಚರಣ್ ಕುಮಾರ್ ಎಂ ಅವರು, 2011ರ ಸರ್ಕಾರದ ಆದೇಶವನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಿ, ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ (Persons with Spinal Cord Injury - PwSCI) ಅಗತ್ಯವಿರುವ ವೈದ್ಯಕೀಯ ಸ್ವಯಂ ಆರೈಕೆ (Medical Self-Care) ಕಿಟ್‌ಗಳು ಹಾಗೂ ಸಹಾಯಕ ಸಾಧನಗಳನ್ನು ಸರ್ಕಾರದಿಂದ ಒದಗಿಸಬೇಕೆಂದು ಮನವಿ ಮಾಡಿದರು.

ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ದೈನಂದಿನ ಆರೈಕೆ, ಉತ್ತಮ ಆರೋಗ್ಯ ಕಾಪಾಡಿಕೊಳ್ಳಲು ಹಾಗೂ ಸ್ವಾವಲಂಬಿ ಜೀವನ ನಡೆಸಲು ಈ ಸೌಲಭ್ಯಗಳು ಅತ್ಯಂತ ಅವಶ್ಯಕವಾಗಿವೆ ಎಂದು ಸಚಿವರ ಗಮನಕ್ಕೆ ತಂದರು.

ಮನವಿಯನ್ನು ಸ್ವೀಕರಿಸಿದ ಮಾನ್ಯ ಸಚಿವರು ವಿಷಯವನ್ನು ಪರಿಗಣಿಸಿ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

## ಕನ್ಯಾಡಿ ಸೇವಾನಿಕೇತನಕ್ಕೆ ಪ್ರಮುಖರ ಭೇಟಿ



**ಕನ್ಯಾಡಿ (ಜೂನ್ 17):** ಬೆಂಗಳೂರು ಕರ್ನಾಟಕ ಘುಮಂತು ಕಾರ್ಯದ ಶ್ರೀ ಬಾಲಕೃಷ್ಣ ಹಾಗೂ ರಾ.ಸ್ವ. ಸಂಘ ಮಂಗಳೂರು ವಿಭಾಗ ಘುಮಂತು ಕಾರ್ಯದ ವಿಭಾಗ ಪ್ರಮುಖರಾದ ಶ್ರೀ ಸುದರ್ಶನ್ ಕೆ. ವಿ, ರವರು ಸೇವಾಭಾರತಿ ಕನ್ಯಾಡಿ ಇದರ ಪ್ರಧಾನ ಕಾರ್ಯಾಲಯ ಸೇವಾನಿಕೇತನಕ್ಕೆ ಜೂನ್ 17 ರಂದು ಭೇಟಿ ನೀಡಿದರು. ಸಂಸ್ಥೆಯ ಪ್ರಸಕ್ತ ಸೇವಾಕಾರ್ಯ ಹಾಗೂ ಯೋಜನೆಗಳ ಬಗ್ಗೆ ಮಾಹಿತಿ ಪಡೆದರು. ಈ ಸಂದರ್ಭದಲ್ಲಿ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಸೌತಡ್ಕ ಸೇವಾಧಾಮ ಪುನಶ್ಚೇತನ ಕೇಂದ್ರಕ್ಕೆ ಒಂದು ಹೊತ್ತಿನ ಊಟಕ್ಕಾಗಿ ದೇಣಿಗೆ



ಚಿಕ್ಕಮಗಳೂರಿನ ಶ್ರೀ ರಾಜೇಶ್ ಹಾಗೂ ಅವರ ಕುಟುಂಬಸ್ಥರನ್ನು ಸೇವಾಭಾರತಿ ಅಧ್ಯಕ್ಷರು ಹಾಗೂ ಸೇವಾಧಾಮ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್ ರವರು ಜೂನ್ 3 ರಂದು ಭೇಟಿ ಮಾಡಿ, ಸೇವಾಧಾಮದ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಿದರು ಈ ಸಂದರ್ಭದಲ್ಲಿ ಶ್ರೀ ರಾಜೇಶ್ ಅವರು ಸೇವಾಧಾಮದ ಒಂದು ಹೊತ್ತಿನ ಊಟಕ್ಕಾಗಿ ರೂ. 3,000/- ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ. ಸಂಸ್ಥೆಯ ಪರವಾಗಿ ಅಧ್ಯಕ್ಷರು ದೇಣಿಗೆಯನ್ನು ಸ್ವೀಕರಿಸಿ, ಧನ್ಯವಾದವಿತ್ತರು.

## ಧ್ವನಿ ಫೌಂಡೇಶನ್ ವತಿಯಿಂದ “Leadership transition program- NAVDHARA ”



ಬೆಂಗಳೂರಿನ ಧ್ವನಿ ಫೌಂಡೇಶನ್ ಸಂಸ್ಥೆಯಿಂದ ನಾಯಕರಿಗಾಗಿ “ Leadership transition program- NAVDHARA” 3 ದಿನದ ಕಾರ್ಯಾಗಾರವನ್ನು ಜೂನ್ 4, 5 ಹಾಗೂ 6ರಂದು ಆಯೋಜಿಸಲಾಗಿತ್ತು. ಈ ಕಾರ್ಯಾಗಾರದಲ್ಲಿ ಸಂಸ್ಥೆಯ ಅಧ್ಯಕ್ಷ ಹಾಗೂ ಸೇವಾಧಾಮ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್ ರವರು ಭಾಗವಹಿಸಿದ್ದರು. ಕಾರ್ಯಾಗಾರವು ಸಂಸ್ಥೆಯ ಅಭಿವೃದ್ಧಿ ಹಾಗೂ ಭವಿಷ್ಯದ ಕಾರ್ಯಯೋಜನೆಗಳ ರೂಪುರೇಷೆಗಳನ್ನು ಚರ್ಚಿಸುವ ಉದ್ದೇಶದಿಂದ ನಡೆಯಿತು.

ಮೂರು ದಿನಗಳ ಕಾರ್ಯಾಗಾರದಲ್ಲಿ ನಾಯಕತ್ವ ವರ್ಗಾವಣೆಯ ಪ್ರಕ್ರಿಯೆ, ಹೊಸ ಯೋಜನೆಗಳ ಪೂರ್ವ ಸಿದ್ಧತೆ ಹಾಗೂ ಪರಿಣಾಮಕಾರಿ ಕಾರ್ಯಪದ್ಧತಿಗಳ ಕುರಿತು ವಿವಿಧ ಚರ್ಚೆಗಳು, ಸಂವಾದಗಳು ಹಾಗೂ ತರಬೇತಿಗಳು ನಡೆದವು. ವಿವಿಧ ಸಂಸ್ಥೆಗಳಿಂದ ಆಗಮಿಸಿದ್ದ ಸುಮಾರು 20 ಸಂಸ್ಥೆಗಳ ನಾಯಕರು ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು. ಈ ಕಾರ್ಯಾಗಾರದಲ್ಲಿ ಸಂಸ್ಥೆಯ ಭವಿಷ್ಯದ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಮುನ್ನಡೆಸುವ ಉದ್ದೇಶಕ್ಕೆ ಮಹತ್ವದ ಹೆಜ್ಜೆಯಾಗಲಿದೆ.

## ಸೇವಾಧಾಮದಲ್ಲಿ ಪುನಶ್ಚೇತನಗೊಂಡ ಸನಿವಾಸಿಗಳ ಅನಿಸಿಕೆ

ದಿನಾಂಕ 6.01.2026ರಂದು KMC ಆಸ್ಪತ್ರೆಯಲ್ಲಿ ಸ್ಪೈನಲ್ ಕಾರ್ಡ್ ಸಮಸ್ಯೆಯಿಂದ ಇರುವಾಗ ಕೆಎಂಸಿ ಅತ್ತಾವರ ಆಸ್ಪತ್ರೆಯಲ್ಲಿ ಸ್ಪೈನಲ್ ಕಾರ್ಡ್ ಆಗಿ ಡಾ. ವೈಶಾಖ್ ಭಟ್ ಸರ್ ರವರ ಸಮ್ಮುಖದಲ್ಲಿ ನಮಗೆ ಸೇವಾಭಾರತಿ ಕನ್ಯಾಡಿಯ ಮಾಹಿತಿಯನ್ನು ನೀಡಿದ ನಂತರ ಸೇವಾಧಾಮದ ಮುಖ್ಯಸ್ಥರಾದ ಶ್ರೀಯುತ ಚರಣ್ ಸರ್ ರವರ ಮಾರ್ಗದರ್ಶನದ ಮೂಲಕ ಕು. ವಿಖ್ಯಾತಿ ಮೇಡಮ್ ರವರ ಮಾರ್ಗದರ್ಶನದ ಮೂಲಕ ಹಾಗೂ ಇಲ್ಲಿಯ ಸಿಬ್ಬಂದಿಗಳ ಸಹಾಯದಿಂದ ದಿನಾಂಕ 8.05.2026ರಂದು ಸೌತಡ್ಕ ಸೇವಾಧಾಮಕ್ಕೆ ಬಂದಿರುತ್ತೇನೆ. ನಂತರ ಇಲ್ಲಿಯ ಸಹೋದ್ಯೋಗಿ, ಸನಿವಾಸಿಗಳೊಂದಿಗೆ ಹಾಗೂ ಅವರ ಕುಟುಂಬಸ್ಥರೊಂದಿಗೆ ಅಲ್ಲಿನ ವಾತಾವರಣ ಒಳ್ಳೆಯ ಒಡನಾಟವನ್ನು ಮೂಡಿಸಿತು. ಸೇವಾಧಾಮದಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದವರಿಗೆ ಆರೋಗ್ಯ ಸೇವೆ ಹಾಗೂ ಚಿಕಿತ್ಸೆಯನ್ನು ನೀಡುತ್ತಿದ್ದು ಉತ್ತಮ ಮಟ್ಟದ ಥೆರಪಿಯನ್ನು ನೀಡುತ್ತಿದ್ದಾರೆ. ಮತ್ತು ಮಾನಸಿಕವಾಗಿ ಕುಗ್ಗಿ ಹೋಗಿರುವ ನಮಗೆ ಮತ್ತೆ ಜೀವನದಲ್ಲಿ ಎದ್ದು ಓಡಾಡುವಂತಹ ಬಲ ಮನೋ ಧೈರ್ಯ ತುಂಬಿರುತ್ತಾರೆ. ಹಾಗೂ ಸೇವಾಧಾಮದಲ್ಲಿ ಉತ್ತಮ ರೀತಿಯಲ್ಲಿ ಭೋಜನ ವ್ಯವಸ್ಥೆ ಮಾಡಿಕೊಡುತ್ತಾರೆ. ಮಾನಸಿಕವಾಗಿ ಕುಗ್ಗಿದ ನನ್ನನ್ನು ಪುನಃ ಜೀವನದಲ್ಲಿ ನನ್ನ ಶಕ್ತಿಯ ಮೇಲೆ ನಾನು ನಿಲ್ಲಬಲ್ಲೆ ಎಂಬ ಶಕ್ತಿ ತುಂಬಿದ ಸೇವಾಧಾಮ ಸಂಸ್ಥೆ ಗೆ ನನ್ನ ತುಂಬು ಹೃದಯದ ಧನ್ಯವಾದಗಳು ಹಾಗೂ ಇಲ್ಲಿ ಕಾರ್ಯನಿರ್ವಹಿಸುವ ಎಲ್ಲಾ ವಿಭಾಗದ ವೈದ್ಯರು ಹಾಗೂ ಸಿಬ್ಬಂದಿಗಳಿಗೆ ಹೃದಯಪೂರ್ವಕ ಅಭಿನಂದನೆಗಳು. ಹಾಗೆ ಇನ್ನಷ್ಟು ಈ ಸೇವಾ ಸಂಸ್ಥೆ ಸನಿವಾಸಿಗಳಿಗೆ ಹೊಸ ಜೀವ ಕೊಡುವ ಸಂಸ್ಥೆಯಾಗಿ ಬೆಳೆಯಲಿ ಎಂದು ನಮ್ಮ ಅನಿಸಿಕೆ.

**ಇತೀ ತಮ್ಮ ವಿಶ್ವಾಸಿ**
**ಹೊಳಿಯವ್ವ ವಾಲಿಕರ್, ಬಾಗಲಕೋಟೆ**

## ಎಚ್‌ಸಿಎಲ್ (HCL) ಅನುದಾನಿತ, ಎಪಿಡಿ (APD) ಬೆಂಗಳೂರು ಮುಖಾಂತರ ಜಾರಿಗೊಂಡಿರುವ ಯೋಜನೆಯ ಫಲಾನುಭವಿಗಳ ಸಂವಾದ ಕಾರ್ಯಕ್ರಮ



ಎಚ್‌ಸಿಎಲ್ (HCL) ಅನುದಾನಿತ ಹಾಗೂ ಎಪಿಡಿ (APD) ಬೆಂಗಳೂರು ಮುಖಾಂತರ ಜಾರಿಗೊಂಡಿರುವ ಯೋಜನೆಯ ಪರಿಣಾಮವನ್ನು ಅವಲೋಕಿಸುವ ಉದ್ದೇಶದಿಂದ ಚಿಕ್ಕಮಗಳೂರಿನ ಆಶಾಕಿರಣ ಅಂಧರ ಶಾಲೆಯಲ್ಲಿ ಫಲಾನುಭವಿಗಳ ಸಂವಾದ ಕಾರ್ಯಕ್ರಮವನ್ನು ಆಯೋಜಿಸಲಾಯಿತು.

ಕಾರ್ಯಕ್ರಮದಲ್ಲಿ ಎಚ್‌ಸಿಎಲ್ ಪ್ರತಿನಿಧಿಗಳು, ಎಪಿಡಿ ಬೆಂಗಳೂರು, ಸೇವಾಭಾರತಿ ತಂಡ ಹಾಗೂ ಒಟ್ಟು 7 ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರು ಭಾಗವಹಿಸಿದರು. ಯೋಜನೆಯ ಪ್ರಗತಿ ಮತ್ತು ಸಾಧನೆಗಳ ಕುರಿತು ವರದಿ ಮಂಡಿಸಿದ ನಂತರ, ಎಚ್‌ಸಿಎಲ್ ಪ್ರತಿನಿಧಿಗಳು ಫಲಾನುಭವಿಗಳೊಂದಿಗೆ ನೇರವಾಗಿ ಸಂವಾದ ನಡೆಸಿ, ಯೋಜನೆಯಿಂದ ಅವರ ಜೀವನದಲ್ಲಿ ಉಂಟಾದ ಬದಲಾವಣೆಗಳು, ಪುನಶ್ಚೇತನ ಪ್ರಗತಿ ಹಾಗೂ ಮುಂದಿನ ಅಗತ್ಯತೆಗಳ ಕುರಿತು ಮಾಹಿತಿ ಪಡೆದರು. ಈ ಕಾರ್ಯಕ್ರಮವು ದಾನಿ ಸಂಸ್ಥೆ ಮತ್ತು ಫಲಾನುಭವಿಗಳ ನಡುವೆ ನೇರ ಸಂಪರ್ಕವನ್ನು ಬೆಳೆಸುವುದರೊಂದಿಗೆ, ಯೋಜನೆಯ ಪರಿಣಾಮವನ್ನು ಅರಿಯಲು ಉತ್ತಮ ವೇದಿಕೆಯಾಗಿತ್ತು. ಎಚ್‌ಸಿಎಲ್, ಎಪಿಡಿ ಬೆಂಗಳೂರು ಹಾಗೂ ಸೇವಾಭಾರತಿ ತಂಡಗಳ ಸಹಭಾಗಿತ್ವದಿಂದ ಕಾರ್ಯಕ್ರಮ ಯಶಸ್ವಿಯಾಗಿ ನೆರವೇರಿತು.

# ಸೇವಾನಿಕೇತನದಲ್ಲಿ ವಾರದ ಭಜನೆ



**ಭಕ್ತಪ್ರಿಯ ಭಜನಾ ತಂಡ, ಕನ್ಯಾಡಿ- II**



**ಭಜೋರೆ ಮಾರುತಿ ಭಜನಾ ತರಬೇತುದಾರರ ತಂಡ, ಬೆಳ್ತಂಗಡಿ**



**ಶ್ರೀ ದುರ್ಗಾಪರಮೇಶ್ವರೀ ಭಜನಾ ಮಂಡಳಿ, ಚಂದ್ಕೂರು**



**ಶ್ರೀ ಗುರು ನರಸಿಂಹ ಭಜನಾ ಮಂಡಳಿ, ಉಜಿರೆ**

## ಕನ್ಯಾಡಿ ಸೇವಾನಿಕೇತನಕ್ಕೆ ಪ್ರಮುಖರ ಭೇಟಿ




**ಕನ್ಯಾಡಿ (ಜೂನ್ 09):** ಜಿಲ್ಲಾ ಧರ್ಮ ಜಾಗರಣ ಪೂರ್ಣಾವಧಿ ಕಾರ್ಯಕರ್ತರಾದ ಶ್ರೀ ಜಯಂತ್ ಮಲ್ಪೆ ಹಾಗೂ ಶಿರಸಿ ವಿಭಾಗದ ಅರೋಗ್ಯಭಾರತಿಯ ಸಹ ಸಂಯೋಜಕರಾದ ಶ್ರೀ ನಾಗೇಶ್ ಪಿ ರವರು ಸೇವಾಭಾರತಿ ಕನ್ಯಾಡಿಯ ಇದರ ಪ್ರಧಾನ ಕಾರ್ಯಾಲಯ ಸೇವಾನಿಕೇತನಕ್ಕೆ ಹಾಗೂ ಸೌತಡ್ಕ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರ ಸೇವಾಧಾಮಕ್ಕೆ ಜೂನ್ 09 ರಂದು ಭೇಟಿ ನೀಡಿದರು. ಈ ಸಂದರ್ಭದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಹಾಗೂ ಸೇವಾಧಾಮ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್ ಸ್ವಾಗತಿಸಿ, ಸಂಸ್ಥೆಯ ಪ್ರಸಕ್ತ ಸೇವಾಕಾರ್ಯ ಹಾಗೂ ಯೋಜನೆಗಳ ಬಗ್ಗೆ ವಿವರವಾಗಿ ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಸಿಬ್ಬಂದಿ ವರ್ಗದವರು, ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರು, ಆರೈಕೆದಾರರು ಉಪಸ್ಥಿತರಿದ್ದರು.

## ಮಂಗಳೂರು ಕೆ.ಎಂ.ಸಿ ಆಸ್ಪತ್ರೆಯ ಡಾ. ವೈಶಾಖ್ ಭಟ್ ರವರು ಬೈಂದೂರು ಸೇವಾಧಾಮಕ್ಕೆ ಭೇಟಿ




**ಬೈಂದೂರು (ಜೂನ್ 19):** ಮಂಗಳೂರು ಕೆಎಂಸಿ ಆಸ್ಪತ್ರೆಯ ಡಾ. ವೈಶಾಖ್ ಭಟ್ ರವರು ಬೈಂದೂರು ಸೇವಾಧಾಮ ಒತ್ತಡಗಾಯ ನಿರ್ವಹಣಾ ಪುನಶ್ಚೇತನ ಕೇಂದ್ರಕ್ಕೆ ಜೂನ್ 19 ರಂದು ಭೇಟಿ ನೀಡಿದರು.

ಈ ಸಂದರ್ಭದಲ್ಲಿ ಅವರು ಕೇಂದ್ರದಲ್ಲಿರುವ ಸನಿವಾಸಿಗಳಿಗೆ ವೈದ್ಯಕೀಯ ಸಲಹೆ ಹಾಗೂ ತಪಾಸಣೆಗಳನ್ನು ನೀಡಿದರು. ಜೊತೆಗೆ, ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಆರೋಗ್ಯ ಮತ್ತು ಪುನಶ್ಚೇತನದ ಬಗ್ಗೆ ಮಾರ್ಗದರ್ಶನ ನೀಡಿದರು.

ಈ ಸಂದರ್ಭದಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರು, ಆರೈಕೆದಾರರು ಹಾಗೂ ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು.

## ಸೇವಾಧಾಮ - ಸೇವಾನಿಕೇತನಕ್ಕೆ ಸಕ್ಷಮ ತಂಡದ ಭೇಟಿ







ಸಕ್ಷಮ ಸ್ಥಾಪನಾ ದಿನದ ಅಂಗವಾಗಿ ಸಕ್ಷಮ ದಕ್ಷಿಣ ಕರ್ನಾಟಕ ಪ್ರಾಂತ ಅಧ್ಯಕ್ಷರಾದ ಶ್ರೀ ಕೇಶವ ಕುಮಾರ್ ಡಿ, ಪುತ್ತೂರು ಜಿಲ್ಲಾ ಸಂಘ ಚಾಲಕರಾದ ಶ್ರೀ ವಿನಯ ಚಂದ್ರ, ಸಕ್ಷಮ ದ. ಕ ಅಧ್ಯಕ್ಷರಾದ ಶ್ರೀ ರಾಜಶೇಖರ್ ಕಾಕುಂಜೆ ರವರ ಜೊತೆಗೆ ಸಕ್ಷಮ ತಂಡವು ಕನ್ಯಾಡಿ ಸೇವಾನಿಕೇತನಕ್ಕೆ ಜೂನ್ 27 ರಂದು ಭೇಟಿ ನೀಡಿತು.

ಸೇವಾಭಾರತಿಯ ಕಾರ್ಯಾಲಯದಲ್ಲಿ ನಡೆದ ಸಭೆಯಲ್ಲಿ ಸಕ್ಷಮದ ಧ್ಯೇಯ, ಉದ್ದೇಶ ಹಾಗೂ ಚಟುವಟಿಕೆಗಳ ಕುರಿತು ಪರಿಚಯ ನೀಡಲಾಯಿತು. ಈ ಸಂದರ್ಭದಲ್ಲಿ ಕನ್ಯಾಡಿಯಲ್ಲಿ ದಿವ್ಯಾಂಗ ಸೇವಾ ಕೇಂದ್ರ (DSK) ಆರಂಭಿಸುವ ಕುರಿತು ಚರ್ಚೆ ನಡೆಯಿತು. ಬೆಳ್ತಂಗಡಿ ತಾಲೂಕಿನ ಸಂಘದ ಅನ್ಯಾನ್ಯ ಪ್ರಮುಖರು ಭಾಗವಹಿಸಿದ್ದರು. ಸಭೆಯ ನಂತರ ವಿಶ್ವ ಪರಿಸರ ದಿನದ ಅಂಗವಾಗಿ ಕಾರ್ಯಾಲಯದ ಆವರಣದಲ್ಲಿ ಗಿಡಗಳನ್ನು ನೆಡಲಾಯಿತು. ಬಳಿಕ ಸಕ್ಷಮದ ತಂಡವು ಸೌತಡ್ಕ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರ ಸೇವಾಧಾಮಕ್ಕೆ ಭೇಟಿ ನೀಡಿ ಅಲ್ಲಿನ ಸೇವಾಕಾರ್ಯಗಳನ್ನು ಅವಲೋಕಿಸಿ, ಸೇವಾಧಾಮ ಮಾಡುತ್ತಿರುವ ಕಾರ್ಯಚಟುವಟಿಕೆಗಳ ಬಗ್ಗೆ ಶ್ಲಾಘಿಸಿದರು.

ಈ ಸಂದರ್ಭದಲ್ಲಿ ಸೇವಾಭಾರತಿ ಅಧ್ಯಕ್ಷ ಹಾಗೂ ಸೇವಾಧಾಮ ಸಂಸ್ಥಾಪಕರಾದ ಶ್ರೀ ಕೆ ವಿನಾಯಕ ರಾವ್, ಸೇವಾಭಾರತಿ ಕಾರ್ಯದರ್ಶಿ ಶ್ರೀ ವಿಷ್ಣುಪ್ರಸಾದ್ ತೆಂಕಿಲ್ಲಾಯ, ರಾ.ಸ್ವ. ಸಂಘ ಮಂಗಳೂರು ವಿಭಾಗ ಘುಮಂತು ಕಾರ್ಯದ ವಿಭಾಗ ಪ್ರಮುಖರಾದ ಶ್ರೀ ಸುದರ್ಶನ್ ಕೆ. ವಿ, ಸಿಬ್ಬಂದಿವರ್ಗದವರು , ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರು
ಹಾಗೂ ಆರೈಕೆದಾರರು ಉಪಸ್ಥಿತರಿದ್ದರು.

## ಸೇವಾಕಾರ್ಯಗಳ ಹಿನ್ನೋಟ

**SEVABHARATHI**

Sevabharathi Achievements in Nutshell
Up to 31 May 2026
District Covered
(Dakshina Kannada, Udupi, Chikkamagalur, Shivamogga, Uttar Kannada, Kodagu)

| Services Provided - Sevadhama Program | Number |
|---|---|
| Identified People with Spinal Cord Injury | 833 |
| Rehabilitated People with Spinal Cord Injury (PwSCI) | 279 |
| Medical Camps Held (Belthangady, Puttur, Sullia, Ujire, Koppa, Moodbidri, Thumbe, Mangalore, Kundapura, Karkala , Mudigere, Kumta, Sirsi, Hassan, Sringeri, Madikeri, Tarikere and Udupi) | 31 |
| Wheelchairs Distributed | 438 |
| Calipers Provided | 64 |
| Walkers given | 90 |
| Home Accessibility like (Ramp, Toilets Provided) | 52 |
| Assistance for Self Employment | 140 |
| Medical Intervention | 326 |
| Surgical Assistance | 16 |
| Hospital Visited (Including PHC, CHC, THC ) | 163 |
| Panchayats Visited | 100 |
| Medical/Self-Care Kits Distributed | 1769 |
| Grocery kit distributed | 343 |
| Solar Inverter | 46 |
| BP/Diabetic Machines | 107 |
| Taluk Covered | 48 |
| **Services Provided - Arogyam Program** | **Number** |
| Blood Donation Camp Organized | 105 |
| Unit's collected | 11,399 |
| Ambulance services | 403 |
| **Services Provided - Sabalini Program** | **Number** |
| Tailoring Camp | 36 |
| Womens Empowered | 967 |

Sevadhama Premises provided Free by
Sri Mahaganapathy Seva Trust®, Southadka
Sevadhama Wound care and Rehabilitation center, Byndooru

### ಸೇವಾಧಾಮದ ಜೂನ್ ತಿಂಗಳ ಸೇವಾಕಾರ್ಯಗಳು

- **ಸೆಲ್ಫ್ ಕೇರ್ ಕಿಟ್ ಮತ್ತು ಮೆಡಿಕಲ್ ಕಿಟ್ - 45**
- **ಗಾಲಿಕುರ್ಚಿ ವಿತರಣೆ - 01**
- **ಹೊಸ ಗುರುತಿಸುವಿಕೆ - 08**
- **ಕೇಂದ್ರದಲ್ಲಿ ಪುನಶ್ಚೇತನ ಪಡೆದುಕೊಳ್ಳುತ್ತಿರುವ ಸನಿವಾಸಿಗಳು**

  **ಸೌತಡ್ಕ ಸೇವಾಧಾಮ - 08**

  **ಬೈಂದೂರು ಸೇವಾಧಾಮ - 04**

## ಸೇವಾಸಂಗಮ

**ಸೇವಾಸಂಗಮ**
**(ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಆನ್ಲೈನ್ ಕಾರ್ಯಾಗಾರ - 39 )**

**ಬೆನ್ನುಹುರಿಯ ಅಪಘಾತದ ನಂತರ ಜೀವನದ ನೈಜತೆ ಮತ್ತು ಸಾರ್ವಜನಿಕ ಪ್ರವೇಶದ ಅರಿವು.**

**ಸಂಪನ್ಮೂಲ ವ್ಯಕ್ತಿ**



**ಡಾ। ರಾಜೇಶ್ ನಾವಡ ಜಿ.ವಿ**
**ಸಹಾಯಕ ಪ್ರಾಧ್ಯಾಪಕರು, ಫಿಸಿಯೋಥೆರಪಿ ವಿಭಾಗ, ಮಾಹೆ ಮಣಿಪಾಲ**

ದಿನಾಂಕ : 13/06/2026
ಸಮಯ : 4pm to 5pm

Live On : Google Meet
https://meet.google.com/dxt-ubyu-tnd

**ಸೇವಾಭಾರತಿ(ರಿ.), ಕನ್ಯಾಡಿ -II**
**9945491241**
**www.sevaabharathi.org**



ಜೂನ್ ತಿಂಗಳ ಸೇವಾಸಂಗಮ ಆನ್ಲೈನ್ ಮಾಹಿತಿ ಕಾರ್ಯಾಗಾರದಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಮಣಿಪಾಲ ಫಿಸಿಯೋಥೆರಪಿ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ರಾಜೇಶ್ ನಾವಡ ಜಿ ವಿ ರವರು ಬೆನ್ನುಹುರಿಯ ಅಪಘಾತದ ನಂತರ ಜೀವನದ ನೈಜತೆ ಮತ್ತು ಸಾರ್ವಜನಿಕ ಪ್ರವೇಶದ ಅರಿವು ಇದರ ಬಗ್ಗೆ ಮಾಹಿತಿ ನೀಡಿದರು ಕಾರ್ಯಾಗಾರದಲ್ಲಿ ಒಟ್ಟು 55 ಮಂದಿ ಭಾಗವಹಿಸಿದ್ದರು.

## ಸೇವಾನಿಧಿ ದಾನಿಗಳು

- ಶ್ರೀಮತಿ ಸ್ವರ್ಣಗೌರಿ, ಜೋಡುಸ್ಥಾನ
- ಶ್ರೀ ರಮೇಶ್ ಪ್ರಭು, ಉಜಿರೆ
- ಶ್ರೀ ಅಣ್ಣು ದೇವಾಡಿಗ, ಧರ್ಮಸ್ಥಳ
- ಮಾಸ್ಟರ್ ಅದ್ವೈತ್ ಪೈ, ಕನ್ಯಾಡಿ
- ಶ್ರೀ ರಾಘವೇಂದ್ರ ಶಾಸ್ತ್ರಿ, ಧರ್ಮಸ್ಥಳ
- ಶ್ರೀ ಕಾರ್ತಿಕ್ ಕೆ, ಧರ್ಮಸ್ಥಳ
- ಶ್ರೀ ಪುರುಷೋತ್ತಮ ಡಿ ಎ, ಧರ್ಮಸ್ಥಳ
- ಶ್ರೀಮತಿ ಬಬಿತಾ, ಕನ್ಯಾಡಿ
- ಶ್ರೀಮತಿ ಸವಿತಾ ಎಮ್ ರಾವ್, ಕನ್ಯಾಡಿ
- ಡಾ ರಾಮಕೃಷ್ಣ ಭಟ್ ಜಿ ಎನ್, ಕನ್ಯಾಡಿ
- ಶ್ರೀ ಬಿ ರಾಮದಾಸ್ ಭಂಡಾರ್ಕರ್, ಉಜಿರೆ
- ಶ್ರೀ ಕೇಶವ ಗೌಡ, ಕರಾಯ
- ಶ್ರೀ ವಿಘ್ನೇಶ್ ಕುಡ್ವ, ಉಜಿರೆ
- ಶ್ರೀ ಕೆ ಪುರಂದರ ರಾವ್, ನಾರ್ಯ
- ಶ್ರೀ ಪುಟ್ಟಸ್ವಾಮಿ, ಉಜಿರೆ
- ಶ್ರೀ ಅಖಿಲೇಶ್, ಪುತ್ತೂರು
- ಶ್ರೀಮತಿ ಜಯಂತಿ ಪುರಂದರ, ನಾರ್ಯ
- ಶ್ರೀ ಗಣೇಶ್ ಭಟ್, ಉಜಿರೆ
- ಶ್ರೀ ಕೃಷ್ಣಮೂರ್ತಿ ರಾವ್, ಕನ್ಯಾಡಿ
- ಶ್ರೀಮತಿ ದಿವ್ಯಾ ಪುರಂದರ, ಬೆಂಗಳೂರು
- ಶ್ರೀ ಕೆ ಸೂರ್ಯನಾರಾಯಣ ರಾವ್, ದೊಂಡೋಲೆ
- ಶ್ರೀ ಪ್ರಜ್ವಲ್ ಜೆ, ದೊಂಡೋಲೆ
- ಶ್ರೀ ಲಕ್ಷ್ಮಣ ಸಪಲ್ಯ, ಉಜಿರೆ
- ಶ್ರೀ ಕೆ ವಿನಾಯಕ ರಾವ್, ಕನ್ಯಾಡಿ
- ಶ್ರೀ ಕೆ ರಮೇಶ್ ಪೂಜಾರಿ, ಕನ್ಯಾಡಿ
- ಶ್ರೀ ದಿವಾಕರ ರಾವ್, ಕನ್ಯಾಡಿ
- ಶ್ರೀ ಮಧುಸೂದನ್, ಉಜಿರೆ
- ಶ್ರೀ ಶಿವಕುಮಾರ್, ಉಜಿರೆ
- ಶ್ರೀ ಬಾಲಕೃಷ್ಣ ರಾವ್ ಕೆ, ಕನ್ಯಾಡಿ
- ಬೇಬಿ ಬಿಲ್ವಾನಿ , ಉಜಿರೆ
- ಶ್ರೀ ಪ್ರಿಜೇಶ್, ಧರ್ಮಸ್ಥಳ
- ಶ್ರೀ ಲಕ್ಷ್ಮೀನಾರಾಯಣ ರಾವ್, ಜೋಡುಸ್ಥಾನ
- ಶ್ರೀ ಗೌರಿಶಂಕರ್ ರಾವ್, ಜೋಡುಸ್ಥಾನ
- ಶ್ರೀ ಸುನಿಲ್ ಕುಮಾರ್ ಜೈನ್, ದೊಂಡೋಲೆ
- ಶ್ರೀ ರಾಜೇಶ್ ಎಮ್, ಕಡಿರುದ್ಯಾವರ
- ಶ್ರೀ ರಾಮಚಂದ್ರ ಗೌಡ ಕೆ, ಕಡಿರುದ್ಯಾವರ
- ಶ್ರೀ ಬಿ ಪುರಂದರ, ನಾರ್ಯ
- ಶ್ರೀ ಸಂತೋಷ್ ಕೆ, ಕೊಕ್ಕಡ
- ಶ್ರೀ ರಜತ್ ಕುಮಾರ್ ಜೆ ಡಿ, ವೇಣೂರು
- ಶ್ರೀ ರಕ್ಷಿತ್ ಎಸ್ ಕುಲಾಲ್, ಬಡಗಕಾರಂದೂರು
- ಶ್ರೀ ಜಯಾನಂದ ಎಮ್, ಕನ್ಯಾಡಿ
- ಶ್ರೀ ಲೋಕೇಶ್ ಪಿ, ಕನ್ಯಾಡಿ
- ಬೇಬಿ ವಿಹಾನ ಎಮ್ ಎಮ್, ನಿಡ್ಲೆ
- ಶ್ರೀ ನಿತಿನ್, ಉಜಿರೆ
- ಶ್ರೀ ರಾಜಾರಾಮ್ ಕಾರಂತ್, ಬೆಂಗಳೂರು
- ಶ್ರೀ ನೀಲಕಂಠ, ನಾರ್ಯ
- ಶ್ರೀ ಗಣೇಶ್ ಭಟ್ , ಉಜಿರೆ

## ಮಹನೀಯ ದಾನಿಗಳು

- ಶ್ರೀಮತಿ ಗಾಯತ್ರಿ ಕೇತನ್ ಪ್ರಧಾನ್, ಮುಂಬೈ
- ಶ್ರೀ ಸುಬ್ರಾಯ ಶೆಣೈ, ಉಡುಪಿ
- ಶ್ರೀ ಗಣೇಶ್ ಗೌಡ, ಕೊಕ್ಕಡ
- ಶ್ರೀ ಕೃಷ್ಣದಾಸ್ ಸಿ ಪಿ, ಉಡುಪಿ
- ಶ್ರೀ ಸುಧಾಕರ್ ಕೆ ಎಸ್, ಧರ್ಮಸ್ಥಳ
- ಕು ವಿಧಾತ್ರೀ ರಾವ್ ಕೆ, ಚಿಕ್ಕಮಗಳೂರು
- ಕು ಸವಿತಾ ಎಮ್ ಕೆ, ಬೆಂಗಳೂರು
- ಶ್ರೀ ರಾಜೇಂದ್ರ ಎಮ್,ಕಡಿರುದ್ಯಾವರ
- ಶ್ರೀ ಎಲ್ ಎಸ್ ಶೇಷಾಚಲ ಹೆಗ್ಡೆ, ಬೆಂಗಳೂರು
- ಶ್ರೀ ಎಮ್ ಪ್ರಭಾಕರ್ ಹೆಗ್ಡೆ, ಉಡುಪಿ
- ಶ್ರೀ ಓಜಸ್ವಿಜೋಧ್ಯುತಿಧರ, ಬೈಂದೂರು
- ಶ್ರೀಮತಿ ಸವಿತಾ ಆರ್, ಮಂಗಳೂರು
- ಶ್ರೀಮತಿ ನೂರಜೆಹಾನ್ ಇಬ್ರಾಹಿಂ ಶೇಖ್, ಬೆಂಗಳೂರು
- ಶ್ರೀ ಮೋಹನ್ ಮಂಜುನಾಥ್ ಶಾನುಭೋಗ್, ಉಡುಪಿ
- ಶ್ರೀ ವಿ ಸದಾನಂದ ಶಾನುಭೋಗ್, ಉಡುಪಿ
- ಶ್ರೀ ದಿನೇಶ್ ಸಂಜೀವ್ ಪೂಜಾರಿ, ಕಡಿರುದ್ಯಾವರ
- ಶ್ರೀ ಯಜ್ಞೇಶ್, ಕೊಣಾಜೆ
- ಶ್ರೀ ಎನ್ ವಿ ವೆಂಕಟೇಶ್, ಉಡುಪಿ
- ಶ್ರೀಮತಿ ರಚಿತಾ ರಾವ್, ಬೆಂಗಳೂರು
- ಕು ಪ್ರತೀಕ್ಷಾ ಎಸ್ ಬಿ, ಬಂಟ್ವಾಳ
- ಶ್ರೀ ಹರ್ಷಿತಾ ಬಿ ವಿ, ಮಂಡ್ಯ
- ಶ್ರೀ ಸುಧೀಂದ್ರ ಭಂಡಾರಿ, ಉಡುಪಿ
- ಶ್ರೀ ಎಚ್ ತುಷಾರ್, ಮಂಗಳೂರು
- ಶ್ರೀ ಹರಿರಾಮ್ ಶೆಣೈ, ಉಡುಪಿ

## ಸಂಘ ಸಂಸ್ಥೆಗಳು

- ಜಿ ಆರ್ ಕನ್ಸಲ್ಟಿಂಗ್, ಬೆಂಗಳೂರು

## ವಸ್ತು ರೂಪದಲ್ಲಿ ದೇಣಿಗೆ

- ಶ್ರೀಮತಿ ಮೀನಾಕ್ಷಿ ಜಿ ಭಟ್, ಜೋಡುಸ್ಥಾನ
- ಉಜಿರೆ ಹವ್ಯಕ ವಲಯ
- ಶ್ರೀ ಸುನಿಲ್ ಕುಮಾರ್, ಬೆಳ್ತಂಗಡಿ
- ಶ್ರೀ ಚಂದ್ರಶೇಖರ, ಕಾಸರಗೋಡು
- ಶ್ರೀ ಬಾಲಚಂದ್ರ, ಕೊಕ್ಕಡ
- ಶ್ರೀ ಕೃಷ್ಣಪ್ರಸಾದ್ ಕೆ, ಅರಸಿನಮಕ್ಕಿ

## ಸೇವಾಧಾಮ ಪುನಶ್ಚೇತನ ಕೇಂದ್ರದಲ್ಲಿ ಫಲಾನುಭವಿಗಳಿಗೆ ವೈದ್ಯರಿಂದ ಸಮಾಲೋಚನೆ



ಸೇವಾಧಾಮ ಪುನಶ್ಚೇತನ ಕೇಂದ್ರದಲ್ಲಿ ಪ್ರತಿ ತಿಂಗಳು ಫಲಾನುಭವಿಗಳಿಗೆ ನಡೆಸುವಂತಹ ವೈದ್ಯರ ಸಮಾಲೋಚನೆಯಲ್ಲಿ ಜೂನ್ ತಿಂಗಳಿನಂದು ಮಂಗಳೂರು ಕೆಎಂಸಿ ಆಸ್ಪತ್ರೆಯ ಸ್ಪೈನ್ ಶಸ್ತ್ರಚಿಕಿತ್ಸಕರು ಡಾ| ವೈಶಾಕ್ ಭಟ್ ಸೇವಾಧಾಮಕ್ಕೆ ಭೇಟಿ ನೀಡಿದ್ದರು. ಫಲಾನುಭವಿಗಳನ್ನು ಪರೀಕ್ಷೆ ಮಾಡಿ ಅವರ ಆರೋಗ್ಯದ ಬಗ್ಗೆ ಮಾಹಿತಿಯನ್ನು ನೀಡಿದರು. ಈ ಸಮಾಲೋಚನೆಯಲ್ಲಿ 4 ಮಂದಿ ಫಲಾನುಭವಿಗಳು ಭಾಗವಹಿಸಿದ್ದರು.

## ಬೈಂದೂರು ಮತ್ತು ಸೌತಡ್ಕ ಸೇವಾಧಾಮ ಪುನಶ್ಚೇತನ ಕೇಂದ್ರದಲ್ಲಿ ಪುನಶ್ಚೇತನವನ್ನು ಪಡೆದುಕೊಂಡು ಜೂನ್ ತಿಂಗಳಲ್ಲಿ ಡಿಸ್ಚಾರ್ಜ್ ಆದವರು




ಶ್ರೀ ಚಂದ್ರ ಕೆ, ಮೈಸೂರು




ಶ್ರೀಮತಿ ಹೊಳಿಯವ್ವ ವಾಲಿಕಾರ, ಬಾಗಲಕೋಟೆ




ಶ್ರೀ ಸುನಿಲ್ ಕುಮಾರ್, ಬೆಳ್ತಂಗಡಿ




ಶ್ರೀ ಜಗದೀಶ್ ವಿಷ್ಣು ಹರಿಕಾಂತ, ಕಾರವಾರ




ಶ್ರೀ ಬಾಲಚಂದ್ರ, ಬೆಳ್ತಂಗಡಿ




ಶ್ರೀ ಕುಮೋದ್ ಮುಖಿಯ, ಬಿಹಾರ್




ಶ್ರೀ ಗಿರೀಶ್ ಶೆಟ್ಟಿ , ಕುಂದಾಪುರ




ಶ್ರೀ ಚಂದ್ರಶೇಖರ್, ಕಾಸರಗೋಡು




ಶ್ರೀ ವಿಜಯಕುಮಾರ, ಗುಲ್ಬರ್ಗ




ಶ್ರೀ ಮಣಿಕಂಠ, ಸಿದ್ದಾಪುರ




ಶ್ರೀ ವಿನ್ಸೆಂಟ್ ಪ್ರಕಾಶ್ ಡಿಸೋಜ, ಕಾರ್ಕಳ

## ಸೇವಾಧಾಮ ಪುನಶ್ಚೇತನ ಕೇಂದ್ರದ ನೂತನ ಕಟ್ಟಡಕ್ಕೆ ಧನಸಹಾಯ ನೀಡುವಂತೆ ಮನವಿ





**ಪ್ರಸ್ತುತ ನಮ್ಮ ಪುನಶ್ಚೇತನ ಕೇಂದ್ರದ ಕಟ್ಟಡ ನಿರ್ಮಾಣ ಕಾಮಗಾರಿ ಉತ್ತಮ ಪ್ರಗತಿಯಲ್ಲಿದೆ. ಮೊದಲನೇ ಮಹಡಿಯ ಮ್ಯಾಸನ್ರಿ (ಇಟ್ಟಿಗೆ) ಕಾಮಗಾರಿ, ಪ್ಲಾಸ್ಟರಿಂಗ್, ವಿದ್ಯುತ್ ವೈರಿಂಗ್ ಹಾಗೂ ಎಲೆಕ್ಟ್ರಿಕಲ್ ಫಿಟ್ಟಿಂಗ್ ಕಾರ್ಯಗಳು ಸಂಪೂರ್ಣಗೊಂಡಿವೆ. ಗ್ರಾನೈಟ್ ಹಾಗೂ ಟೈಲ್ಸ್ ಅಳವಡಿಸುವ ಕಾಮಗಾರಿ ನಡೆಯುತ್ತಿದ್ದು, ಎರಡನೇ ಮಹಡಿಯ ಸ್ಲ್ಯಾಬ್ ಕಾಂಕ್ರೀಟ್ ಕಾಮಗಾರಿಯೂ ಯಶಸ್ವಿಯಾಗಿ ಪೂರ್ಣಗೊಂಡಿದೆ.ಇದುವರೆಗೆ ಒಟ್ಟು ರೂ. 2,31,98,965/- ವೆಚ್ಚವಾಗಿದ್ದು, ಇನ್ನೂ ಮೂರು ಮಹಡಿಗಳ ಕಾಮಗಾರಿ ಪೂರ್ಣಗೊಳ್ಳಬೇಕಿದೆ. ಮುಂದಿನ ಹಂತದ ಕಾಮಗಾರಿಯನ್ನು ಮುಂದುವರಿಸಲು ನಿಧಿಯ ಅವಶ್ಯಕತೆ ಇದ್ದು, ದಾನಿಗಳ ಸಹಕಾರವನ್ನು ನಾವು ನಿರೀಕ್ಷಿಸುತ್ತಿದ್ದೇವೆ."**

ಸೇವಾಭಾರತಿ ಸಂಸ್ಥೆಯು ಕಳೆದ 21 ವರ್ಷಗಳಲ್ಲಿ ಸಾಮಾಜಿಕವಾಗಿ ಅನೇಕ ಕ್ಷೇತ್ರಗಳಲ್ಲಿ ಸೇವಾ ಕಾರ್ಯಗಳನ್ನು ಮಾಡುತ್ತ ಬರುತ್ತಿದ್ದು, ಸಬಲಿನಿ ಯೋಜನೆಯಡಿ ಮಹಿಳೆಯರ ಆರ್ಥಿಕ ಸಬಲಿಕರಣಕ್ಕಾಗಿ ಉಚಿತ ಟೈಲರಿಂಗ್ ತರಬೇತಿಗಳು, ಆರೋಗ್ಯಮ್ ಯೋಜನೆಯಡಿ ಆಂಬುಲೆನ್ಸ್ ಸೇವೆ ಹಾಗೂ ರಕ್ತದಾನ ಶಿಬಿರಗಳು, ಸೇವಾಧಾಮ ಯೋಜನೆ ಯಡಿ ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಪುನಶ್ಚೇತನ ಕೇಂದ್ರ, ಈ ಮೂರು ಯೋಜನೆಗಳು ಯಶಸ್ವಿಯಾಗಿ ನಡೆಯುತ್ತಿದೆ.

ನಮ್ಮ ಸಂಸ್ಥೆಯ ಸಮಾಜಮುಖಿ ಚಟುವಟಿಕೆಗಳನ್ನು ಉತ್ತೇಜಿಸುವ ದೃಷ್ಟಿಯಿಂದ ಕನ್ಯಾಡಿಯಲ್ಲಿ 2023ನೇ ವರ್ಷದಲ್ಲಿ ಸರ್ಕಾರವು ಒಟ್ಟು 10 ಸೆಂಟ್ಸ್ ಜಮೀನನ್ನು ನಮ್ಮ ಸಂಸ್ಥೆಯ ಕಟ್ಟಡ ನಿರ್ಮಾಣ ಉದ್ದೇಶಕ್ಕಾಗಿ ಮಂಜೂರುಗೊಳಿಸಿದೆ. 2025 ರಲ್ಲಿ ಸೇವಾಭಾರತಿಯ ಕಾರ್ಯಚಟುವಟಿಕೆಗಳಿಗೆ ಹಾಗೂ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗಾಗಿ ಪುನಶ್ಚೇತನ ಕೇಂದ್ರದ ಉದ್ದೇಶಕ್ಕಾಗಿ ಕಟ್ಟಡ ನಿರ್ಮಾಣಕ್ಕೆ ಮುಂದಾಗಿದ್ದೇವೆ. ಅಲ್ಲದೆ ಧನಸಹಾಯ ನೀಡುವಂತೆ ಬೇರೆ ಬೇರೆ ಸಂಸ್ಥೆಗಳಿಗೆ ಮನವಿಯನ್ನೂ ಮಾಡಿದ್ದೇವೆ. ಈ ಮನವಿಗೆ ಸ್ಪಂದಿಸಿ ನೆಲಮಹಡಿಗೆ Mangalore Refinery and Petrochemicals Limited (MRPL) ನಿಂದ ರೂ. 42 ಲಕ್ಷ ಮಂಜೂರಾಗಿ ಅದರಲ್ಲಿ ನೆಲಮಹಡಿಯ ಕಟ್ಟಡದ ನಿರ್ಮಾಣ ಸಂಪೂರ್ಣವಾಗಿ ಪೂರ್ಣಗೊಂಡು ಉದ್ಘಾಟನೆ ಆಗಿದೆ., ಹಾಗೂ NMPA CSR ಅನುದಾನದ ಅಡಿಯಲ್ಲಿ ಮೊದಲ ಮಹಡಿಯ ಪಿಲ್ಲರ್ ಹಾಗೂ ಸ್ಲ್ಯಾಬ್ ಕಾಮಗಾರಿ ಸಂಪೂರ್ಣವಾಗಿ ಪೂರ್ಣಗೊಂಡಿದ್ದು. LIC ಯ ರೂ. 40 ಲಕ್ಷ ಮಂಜೂರುಗೊಂಡಿರುವ ಕಾರಣ ಅತೀ ಶೀಘ್ರದಲ್ಲಿ ಈ ಮಹಡಿ ನಿರ್ಮಾಣಗೊಳ್ಳಲಿದೆ. ಪ್ರಸ್ತುತ ಇದೀಗ, ಎರಡನೇ ಮಹಡಿಯ ಕಾಮಗಾರಿ ಪ್ರಾರಂಭವಾಗಿದೆ.

ಬೇರೆ ಬೇರೆ CSR, ದಾನಿಗಳಿಗೆ, ಸಂಘ ಸಂಸ್ಥೆಗಳಿಗೆ ಸಹಕಾರವನ್ನು ಅಪೇಕ್ಷಿಸುತಿದ್ದೇವೆ. ನಿಯೋಜಿತ ಕಟ್ಟಡದಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದವರಿಗೆ ಉತ್ತಮ ಪುನಶ್ಚೇತನಕಾಗಿ ಫಿಸಿಯೋಥೆರಪಿ ವಾರ್ಡ್ ಕೇಂದ್ರಾಧಾರಿತ ಸೇವೆಗಾಗಿ ವಸತಿ (12 ಮಂದಿ ಮತ್ತು ಆರೈಕೆದಾರರಿಗೆ ಉಳಿಯುವಂತ ವ್ಯವಸ್ಥೆ), ಅಡುಗೆ ಮತ್ತು ಊಟದ ಹಾಲ್ ದಿವ್ಯಾಂಗರಿಗೆ ಅನೇಕ ರೀತಿಯ ತರಬೇತಿ ವೈದ್ಯಕೀಯ ತಪಾಸಣೆಗಾಗಿ ಬಹು ಉದ್ದೇಶಿತ ಸಭಾಂಗಣ ಮತ್ತು ಪ್ರಧಾನ ಕಚೇರಿ ಹೊಂದಿರುವ ಈ ಕಟ್ಟಡ ಸಂಪೂರ್ಣ ದಿವ್ಯಾಂಗ ಸ್ನೇಹಿಯಾಗಿ ನಿರ್ಮಾಣವಾಗಲಿದೆ. ಈ ಕಟ್ಟಡ ಪೂರ್ತಿ ನಿರ್ಮಾಣವಾದಲ್ಲಿ ಕರ್ನಾಟಕದಾದ್ಯಂತ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಉತ್ತಮ ಸೇವೆಯನ್ನು ನೀಡುವ ಪುನಶ್ಚೇತನ ಕೇಂದ್ರವಾಗುತ್ತದೆ.

ಈವರೆಗೂ ತಾವು ನಮ್ಮ ಎಲ್ಲಾ ಯೋಜನೆಗಳಿಗೂ ಕೈಲಾದಷ್ಟು ಸಹಾಯ ನೀಡುತ್ತಿದ್ದು, ಈ ಬಾರಿ ಈ ಕಟ್ಟಡ ಕಟ್ಟಲು ಸಹಾಯ ನೀಡುವಿರೆಂದು ಭಾವಿಸಿದ್ದೇವೆ. ಈ ಕಟ್ಟಡವು ನಿರ್ಮಾಣಗೊಂಡು ಕಾರ್ಯಾಚರಿಸಲು ಪ್ರಾರಂಭಿಸಿದ್ದಲ್ಲಿ ರಾಜ್ಯದಾದ್ಯಂತವಿರುವ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಆಶಾಕಿರಣವಾಗಿ ಮಾದರಿಯಾದ ಪುನಶ್ಚೇತನ ಕೇಂದ್ರವಾಗುವುದರಲ್ಲಿ ಸಂಶಯವಿರುವುದಿಲ್ಲ. ಆದಕಾರಣ ನಮ್ಮ ಸಂಸ್ಥೆಗೆ ಧನಸಹಾಯ ನೀಡಿ ಈ ಯೋಜನೆಯನ್ನು ಯಶಸ್ವಿ-ಗೊಳಿಸಿಕೊಡಬೇಕೆಂದು ತಮ್ಮಲ್ಲಿ ಮತ್ತೊಮ್ಮೆ ಕಳಕಳಿಯ ವಿನಂತಿ.

### BANK ACCOUNT DETAILS

Scan and Pay also

| | | |
|---|---|---|
| A/c Holder | - | M/s. Sevabharathi(R) |
| A/c No | - | 120000400920 |
| Account Type | - | Current Account, Canara Bank Dharmasthala Branch |
| IFS Code | - | CNRB0010246 |

# ತಮ್ಮ ವಿಶೇಷ ದಿನವನ್ನು ವಿಶಿಷ್ಟ ರೀತಿಯಲ್ಲಿ ಆಚರಿಸಿ ಮಾದರಿಯಾದವರು

**ಸೇವಾಧಾಮದಲ್ಲಿ ಪುನಶ್ಚೇತನ ಪಡೆಯುತ್ತಿರುವ ದಿವ್ಯಾಂಗರಿಗೆ ದೇಣಿಗೆಯನ್ನು ನೀಡುವ ಮೂಲಕ ತಮ್ಮ ವಿಶೇಷ ದಿನವನ್ನು ಆಚರಿಸಿ ಎಲ್ಲರಿಗೂ ಮಾದರಿಯಾಗಿದ್ದೀರಿ.**



**ಶ್ರೀ ಬಾಲಕೃಷ್ಣ,** ಸೌತಡ್ಕ



**ಡಾ। ಗೋಪಾಲಕೃಷ್ಣ ಕೆ** ಉಜಿರೆ



**ಶ್ರೀ ಕೆ. ಕೃಷ್ಣ ಭಟ್,** ಕೊಕ್ಕಡ



**ಶ್ರೀಮತಿ ಛಾಯ ಸಿ ಎಸ್ ,** ಕನ್ಯಾಡಿ



**ಶ್ರೀ ಚೇತನ್ ,** ಅಲೆಕ್ಕಿ



**ಶ್ರೀಮತಿ ಗಾಯತ್ರಿ ಕೇತನ್ ಪ್ರಧಾನ್,** ಮುಂಬೈ



**ಶ್ರೀ ಗಣೇಶ್ ಗೌಡ ಕಲ್ಲೆ,** ಕೊಕ್ಕಡ



**ಶ್ರೀ ಧನೇಂದ್ರ,** ಧರ್ಮಸ್ಥಳ



**ಶ್ರೀ ಜಯಾನಂದ ಗೌಡ ಮಲ್ಯಾಳ,** ಕನ್ಯಾಡಿ II



**ಶ್ರೀ ಎಲ್ ಎಸ್ ಶೇಷಾಚಲ ಹೆಗ್ಡೆ,** ಬೆಂಗಳೂರು



**ಶ್ರೀಮತಿ ಪೂರ್ಣಿಮಾ ದಿನೇಶ್ ಪೂಜಾರಿ,** ಕಾನರ್ಪ



**ಕು। ಪ್ರತೀಕ್ಷಾ ಎಸ್ ಬಿ,** ಮಾಣಿಲ



**ಶ್ರೀ ಪುರುಷೋತ್ತಮ ಡಿ ಎ,** ಧರ್ಮಸ್ಥಳ



**ಮಾಸ್ಟರ್। ರಿಯಾಂಶ್,** ಬೆಳ್ತಂಗಡಿ



**ಶ್ರೀ ಸಂತೋಷ್ ಕೆ,** ಕೊಕ್ಕಡ



**ಶ್ರೀ ತುಷಾರ್,** ಮಂಗಳೂರು



**ಕು। ವಿಧಾತ್ರಿ ರಾವ್ ಕೆ,** ಚಿಕ್ಕಮಗಳೂರು



**ಶ್ರೀ ವಿಜಯ ಕೊಡವೂರು,** ಉಡುಪಿ



**ಶ್ರೀ ಮಹದೇವ ಬೆಂಡೆ,** ಮುಂಡಾಜೆ



**ಮಾಸ್ಟರ್। ಸೋಹಮ್ ಉಡುಪ,** ಬೆಂಗಳೂರು

# ತಮ್ಮ ವಿಶೇಷ ದಿನವನ್ನು ವಿಶಿಷ್ಟ ರೀತಿಯಲ್ಲಿ ಆಚರಿಸಿ ಮಾದರಿಯಾದವರು

**ಸೇವಾಧಾಮದಲ್ಲಿ ಪುನಶ್ಚೇತನ ಪಡೆಯುತ್ತಿರುವ ದಿವ್ಯಾಂಗರಿಗೆ ದೇಣಿಗೆಯನ್ನು ನೀಡುವ ಮೂಲಕ ತಮ್ಮ ವಿಶೇಷ ದಿನವನ್ನು ಆಚರಿಸಿ ಎಲ್ಲರಿಗೂ ಮಾದರಿಯಾಗಿದ್ದೀರಿ.**



**ಶ್ರೀಮತಿ ವಸಂತಿ ಗೌಡ,**
ದೊಂಡೋಲೆ



**ಶ್ರೀ ಓ.ಆರ್ ಎಲ್ಲಪ್ಪ,**
ಬೆಂಗಳೂರು




**ಶ್ರೀ ಸಹಜ್ ರೈ ಬಳಜ್ಜ,**
ಪುತ್ತೂರು



**ಬೇಬಿ। ಆದ್ಯ ಎ**



**ಬೇಬಿ। ಶರಣ್ಯ ಎಸ್ ಎಚ್**
ನೆಲ್ಲಿಕಾರು

# ಜೆಸಿಐ ಸಿಟಿ ಲೇಡಿ ಜೆಸಿ ವಿಂಗ್ಸ್ ವತಿಯಿಂದ ರಕ್ತದಾನ ಜಾಗೃತಿ ಮಾಹಿತಿ ಕಾರ್ಯಾಗಾರ ಹಾಗೂ ರಕ್ತದಾನಿಗಳಿಗೆ ಗೌರವಾರ್ಪಣೆ







**ಉಜಿರೆ ( ಜೂನ್ 19) :** ಜೆಸಿಐ ಸಿಟಿ ಲೇಡಿ ಜೆಸಿ ವಿಂಗ್ಸ್ ವತಿಯಿಂದ 'ರಕ್ತದಾನ ಜಾಗೃತಿ ಮಾಹಿತಿ ಕಾರ್ಯಗಾರ' ಮತ್ತು 'ರಕ್ತದಾನಿಗಳಿಗೆ ಗೌರವಾರ್ಪಣೆ' ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ ಮುಖ್ಯ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ಮಾತನಾಡಿದ ಕನ್ಯಾಡಿಯ ಸೇವಾಭಾರತಿ ಅಧ್ಯಕ್ಷರಾದ ಹಾಗೂ ಸೇವಾಧಾಮ ಸಂಸ್ಥಾಪಕರಾದ ಶ್ರೀ ಕೆ ವಿನಾಯಕ ರಾವ್ ರವರು, ರಕ್ತದಾನದ ಮಹತ್ವ ಮತ್ತು ಸಮಾಜದಲ್ಲಿ ಅದರ ಅಗತ್ಯತೆಯ ಬಗ್ಗೆ ಸವಿವರವಾದ ಜಾಗೃತಿ ಮೂಡಿಸಿದರು.

ಇದೇ ಸಂದರ್ಭದಲ್ಲಿ ಸಮಾಜದಲ್ಲಿ ಮಾದರಿಯಾಗಿ ನಿರಂತರ ರಕ್ತದಾನ ಮಾಡುತ್ತಾ ಬಂದಿರುವ ಇಬ್ಬರು ಸಾಧಕರನ್ನು ಗೌರವಿಸಲಾಯಿತು. 48 ಬಾರಿ ರಕ್ತದಾನ ಮಾಡುವುದರ ಜೊತೆಗೆ, ಹಲವು ರಕ್ತದಾನ ಶಿಬಿರಗಳನ್ನು ಯಶಸ್ವಿಯಾಗಿ ಆಯೋಜಿಸಿದ ಎಸ್‌ಡಿಎಂ ಪಾಲಿಟೆಕ್ನಿಕ್ ಕಾಲೇಜಿನ ಉಪನ್ಯಾಸಕ ಅವನೀಶ್ ಹಾಗೂ 30ಕ್ಕೂ ಹೆಚ್ಚು ಬಾರಿ ರಕ್ತದಾನ ಮಾಡಿರುವ ಉಜಿರೆ ವರ್ತಕರ ಸಂಘದ ಅಧ್ಯಕ್ಷರು ಮತ್ತು ರಮ್ಯಾ 1 ಗ್ರಾಂ ಗೋಲ್ಡ್ ಫ್ಯಾನ್ಸಿಯ ಮಾಲಕರಾದ ಪ್ರಸಾದ್ ಬಿ. ಎಸ್. ಅವರನ್ನು ಆತ್ಮೀಯವಾಗಿ ಸನ್ಮಾನಿಸಿ ಗೌರವಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಘಟಕದ ಅಧ್ಯಕ್ಷರಾದ ಮೊಹಮ್ಮದ್ ಮಿರ್ಷಾದ್ ಅವರು ವಹಿಸಿದ್ದರು. ವೇದಿಕೆಯಲ್ಲಿ ತರಬೇತಿ ವಿಭಾಗದ ವಲಯ ಸಂಯೋಜಕರಾದ ಜಿಎಫ್‌ಎಮ್ ಆಶಾಲತಾ ಪ್ರಶಾಂತ್, ಘಟಕದ ಕಾರ್ಯದರ್ಶಿ ಭವ್ಯಶ್ರೀ ಕೀರ್ತಿ ರಾಜ್ ಹಾಗೂ ಘಟಕದ ಮಹಿಳಾ ಜೆಸಿ ಸಂಯೋಜಕರಾದ ಹೇಮಾವತಿ ಕೆ. ಉಪಸ್ಥಿತರಿದ್ದರು.

## ನಿಮಗಿದು ತಿಳಿದಿರಲಿ

### ದೇಹದ ತೂಕಕ್ಕಿಂತ ತುಂಬಾ ಹಗುರ... ಆದರೆ ಅಮೂಲ್ಯ!

ನಮ್ಮ ಇಡೀ ದೇಹದ ಚಲನೆ, ಸ್ಪರ್ಶ, ಸಂವೇದನೆ ಮತ್ತು ಪ್ರತಿಯೊಂದು ಕಾರ್ಯವನ್ನೂ ನಿಯಂತ್ರಿಸುವ ಬೆನ್ನುಹುರಿಯ (Spinal Cord) ತೂಕ ಕೇವಲ 35 ಗ್ರಾಂ ಮಾತ್ರ! ಇಷ್ಟು ಹಗುರವಾದ ಈ ಅದ್ಭುತ ನರಗಳ ವ್ಯವಸ್ಥೆಯೇ ಮೆದುಳು ಮತ್ತು ದೇಹದ ನಡುವಿನ ಪ್ರಮುಖ ಸಂಪರ್ಕ ಸೇತುವೆಯಾಗಿ ಕಾರ್ಯನಿರ್ವಹಿಸುತ್ತದೆ. ಸಣ್ಣದಾಗಿ ಕಾಣುವ ಈ ಅಂಗವು ನಮ್ಮ ದೇಹದ ಪ್ರತಿಯೊಂದು ಚಲನೆ ಮತ್ತು ಅನುಭವವನ್ನು ಸುಗಮವಾಗಿ ನಡೆಸಿಕೊಡುವ ಪ್ರಕೃತಿಯ ಅದ್ಭುತ ಸೃಷ್ಟಿಯಾಗಿದೆ.

## ನಮ್ಮ ಯೋಜನೆಗಳು

**ಆರೋಗ್ಯಮ್** : ರಕ್ತದಾನ ಶಿಬಿರಗಳ ಆಯೋಜನೆ ಮತ್ತು ಆ್ಯಂಬುಲೆನ್ಸ್ ಸೇವೆಗಳು.

**ಸಬಲಿನಿ** : ಮಹಿಳಾ ಸ್ವಾವಲಂಬನಕ್ಕಾಗಿ ವೃತ್ತಿ ತರಬೇತಿ

**ಸೇವಾಧಾಮ** : ಬೆನ್ನುಹುರಿ ಅಪಘಾತಗೊಂಡವರಿಗಾಗಿ ಪುನಶ್ಚೇತನ ಕೇಂದ್ರ,

**ಸೇವಾಪಥ** : ಮಾಸಿಕ ಈ-ನ್ಯೂಸ್ ಲೆಟರ್ .

**ಸೇವಾ ಸಂಗಮ** : ಬೆನ್ನುಹುರಿ ಅಪಘಾತಗೊಂಡವರಿಗಾಗಿ ಆನ್‌ಲೈನ್ ಮೂಲಕ ಸಂಬಂಧಿತ ತಜ್ಞರಿಂದ ಮಾಹಿತಿ, ತರಬೇತಿ ಹಾಗೂ ಮಾರ್ಗದರ್ಶನ.

**ಆರೋಗ್ಯ ಬಿಂದು** : ಫಲಾನುಭವಿಗಳಿಗೆ ಕನಿಷ್ಠ ದರದಲ್ಲಿ ಸೆಲ್ಫ್ ಕೇರ್ & ಮೆಡಿಕಲ್ ಕಿಟ್ ಗಳು

## ತಾವು ಹೀಗೂ ನಮ್ಮ ಸಂಸ್ಥೆಯೊಂದಿಗೆ ಕೈಜೋಡಿಸಬಹುದಾಗಿದೆ

### ಸಂಸ್ಥೆಗೆ ದೇಣಿಗೆ ಮೂಲಕ ಸಹಕಾರ

ರೂ. 2000/ - ನೀಡುವುದರ ಮೂಲಕ ಒಟ್ಟು ಫಲಾನುಭವಿಯ ಒಂದು ತಿಂಗಳ ಮೆಡಿಕಲ್ ಕಿಟ್ ಗಳಿಗಾಗಿ ಸಹಕಾರ.

ರೂ. 3,000/ - ನೀಡುವುದರ ಮೂಲಕ ಸೇವಾಧಾಮದಲ್ಲಿ ಒಂದು ಹೊತ್ತಿನ ಊಟೋಪಚಾರಕ್ಕೆ ಸಹಕಾರ

ರೂ. 4,500/ - ನೀಡುವುದರ ಮೂಲಕ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಯ ಸಂದರ್ಭ ಪೋಷಕರಿಗಾಗಿ ಸಹಕಾರ

ರೂ. 10,000/ - ನೀಡುವುದರ ಮೂಲಕ ಸಮುದಾಯ ಭೇಟಿಗಾಗಿ ಸಹಕಾರ

ರೂ. 10,000/- ನೀಡುವುದರ ಮೂಲಕ ಕೇಂದ್ರದಲ್ಲಿ ಹುಟ್ಟು ಹಬ್ಬದ ಆಚರಣೆ ಮಾಡುವುದು

ರೂ. 15,000/ - ನೀಡುವುದರ ಮೂಲಕ ಒಬ್ಬ ಫಲಾನುಭವಿಗಳಿಗೆ ಒಂದು ಗಾಲಿಕುರ್ಚಿಯ ಕೊಡುಗೆ

ರೂ. 18,000/ - ನೀಡುವುದರ ಮೂಲಕ ಒಬ್ಬ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಗಾಗಿ ಸಹಕಾರ

## DONATE & JOIN US IN OUR MISSION

A/c Holder - M/s. Sevabharathi(R)
A/c No - 01682200072637
IFS Code - CNRB0010168
Bank - Canara Bank, Kokkada Branch

## Support us for constructions of Rehabilitation Centre

SEVABHARATHI REGD
237887292400920@cnrb

A/c Holder - M/s. Sevabharathi(R)
A/c No - 120000400920
Account Type - Current Account Canara Bank Dharmasthala Branch
IFS Code - CNRB0010246

# ಬೆನ್ನುಹುರಿ ಅಪಘಾತದ ಬಳಿಕ 19 ವರ್ಷಗಳ ಹೋರಾಟ ನಡೆಸಿ ಸ್ವಾವಲಂಬಿ ಬದುಕು ಕಟ್ಟಿಕೊಂಡ ಶಿರಸಿಯ ಶ್ರೀ ಕೃಷ್ಣ ಪೂಜಾರಿ



ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲೂಕಿನ ಬಪ್ಪನಳ್ಳಿ ಗ್ರಾಮದಲ್ಲಿ, 1990ರ ಜುಲೈ 14ರಂದು ಶ್ರೀ ಮಂಜುನಾಥ್ ಪೂಜಾರಿ ಹಾಗೂ ಶ್ರೀಮತಿ ಸುಶೀಲಾ ಪೂಜಾರಿ ದಂಪತಿಗಳ ಪುತ್ರನಾಗಿ ಕೃಷ್ಣ ಜನಿಸಿದರು. ಬಾಲ್ಯದಿಂದಲೇ ಚುರುಕು, ಮುಗ್ಧ ಹಾಗೂ ಕನಸುಗಳಿಂದ ತುಂಬಿದ ಕೃಷ್ಣ, ಊರಿನ ಸರ್ಕಾರಿ ಶಾಲೆಯಲ್ಲಿ ತಮ್ಮ ಪ್ರಾಥಮಿಕ ಶಿಕ್ಷಣವನ್ನು ಪಡೆಯುತ್ತಿದ್ದರು. ಅವರ ಬಾಲ್ಯವೂ ಇತರ ಮಕ್ಕಳಂತೆಯೇ ಸಂತೋಷ ಮತ್ತು ಆಟಪಾಠಗಳಿಂದ ಕೂಡಿತ್ತು. ಆದರೆ ವಿಧಿಯಾಟ ಯಾರೂ ಊಹಿಸದ ರೀತಿಯಲ್ಲಿ ಅವರ ಜೀವನದ ದಿಕ್ಕನ್ನೇ ಬದಲಿಸಿತು.

2003ರ ಅಕ್ಟೋಬರ್ 8ರಂದು ಶಾಲೆಗೆ ರಜೆ ಇದ್ದ ಕಾರಣ ಕೃಷ್ಣ ತಮ್ಮ ಅಜ್ಜಿಯ ಮನೆಗೆ ಹೋಗಿದ್ದರು. ಅಲ್ಲಿ ಅಣ್ಣನ ಜೊತೆ ಆಟವಾಡುತ್ತಿದ್ದ ಸಂದರ್ಭದಲ್ಲಿ ಹತ್ತಿರದಲ್ಲಿದ್ದ ಕಾಂಪೌಂಡ್ ಗೋಡೆ ಏಕಾಏಕಿ ಕುಸಿದು ಅವರ ಮೇಲೆ ಬಿದ್ದಿತು. ಗಂಭೀರವಾಗಿ ಗಾಯಗೊಂಡ ಅವರನ್ನು ಸ್ಥಳೀಯರು ಹಾಗೂ ಕುಟುಂಬದವರು ತಕ್ಷಣ ಹುಬ್ಬಳ್ಳಿಯ ಕಲಾಂ ದಾನಿ ಆಸ್ಪತ್ರೆಗೆ ದಾಖಲಿಸಿದರು. ಶಸ್ತ್ರಚಿಕಿತ್ಸೆಯ ನಂತರ ವೈದ್ಯರು ನೀಡಿದ ಸುದ್ದಿ ಕುಟುಂಬದವರನ್ನೇ ಬೆಚ್ಚಿಬೀಳಿಸಿತು. ಗೋಡೆ ಬಿದ್ದ ರಭಸಕ್ಕೆ ಕೃಷ್ಣ ಅವರ ಬೆನ್ನುಹುರಿಗೆ ಗಂಭೀರ ಗಾಯವಾಗಿತ್ತು. ಇನ್ನು ಮುಂದೆ ಅವರು ತನ್ನ ಕಾಲಿನ ಮೇಲೆ ನಡೆಯಲು ಸಾಧ್ಯವಿಲ್ಲ, ಗಾಲಿಕುರ್ಚಿಯ ಮುಖಾಂತರವೇ ನಡೆಯಬೇಕು ಎಂದು ತಿಳಿಸಿದರು.

ಸುಮಾರು ಎರಡು ತಿಂಗಳು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಮನೆಗೆ ಮರಳಿದ ಕೃಷ್ಣ, ಬೆನ್ನುಹುರಿ ಗಾಯದ ಕುರಿತು ಸರಿಯಾದ ಮಾಹಿತಿ ಮತ್ತು ಪುನಶ್ಚೇತನದ ಅರಿವಿಲ್ಲದ ಕಾರಣ 19 ವರ್ಷಗಳ ಕಾಲ ಮನೆಯಲ್ಲಿಯೇ ಮಲಗಿದ ಸ್ಥಿತಿಯಲ್ಲಿ ಬದುಕನ್ನು ಕಳೆಯಬೇಕಾಯಿತು. ಆಯುರ್ವೇದ, ಇಂಗ್ಲಿಷ್ ಸೇರಿದಂತೆ ಅನೇಕ ಚಿಕಿತ್ಸಾ ವಿಧಾನಗಳನ್ನು ಪ್ರಯತ್ನಿಸಿದರೂ ಯಾವುದೇ ಗಮನಾರ್ಹ ಬದಲಾವಣೆ ಕಂಡುಬರಲಿಲ್ಲ. ಸ್ಪೈನಲ್ ಕಾರ್ಡ್ ಗಾಯದ ನಂತರ ಅಗತ್ಯವಾದ ಪುನಶ್ಚೇತನದ ಮಹತ್ವ ತಿಳಿದಿರದ ಕಾರಣ ಅವರ ಜೀವನ ನಿಶ್ಚಲವಾಗಿಯೇ ಉಳಿಯಿತು. ಎಳೆಯ ವಯಸ್ಸಿನಲ್ಲಿ ಸಂಭವಿಸಿದ ಆ ದುರ್ಘಟನೆ ಅವರ ದೇಹವನ್ನಷ್ಟೇ ಅಲ್ಲ, ಬದುಕಿನ ಕನಸುಗಳನ್ನೂ ಕುಗ್ಗಿಸಿತು. ಆದರೂ ಅವರ ಮನಸ್ಸಿನಲ್ಲಿದ್ದ ಬದುಕುವ ಛಲ ಎಂದಿಗೂ ನಂದಲಿಲ್ಲ

ಈ ವೇಳೆ ಉತ್ತರ ಕನ್ನಡ ಜಿಲ್ಲೆಯ ಕ್ಷೇತ್ರ ಸಂಯೋಜಕರಾಗಿದ್ದ ಶ್ರೀ ಪುರುಷೋತ್ತಮ ಅವರು ಕೃಷ್ಣ ಅವರ ಮನೆಗೆ ಭೇಟಿ ನೀಡಿ ಸೇವಾಧಾಮದ ಬಗ್ಗೆ ಪರಿಚಯ ಮಾಡಿಕೊಟ್ಟರು. ಆಗಾಗಲೇ ಹಲವು ಚಿಕಿತ್ಸೆಗಳ ಅನುಭವ ಹೊಂದಿದ್ದ ಕೃಷ್ಣ ಅವರಿಗೆ ಇದರಿಂದಲೂ ಪ್ರಯೋಜನವಾಗುವುದಿಲ್ಲ ಎಂಬ ಸಂದೇಹ ಉಂಟಾಗಿ ಮೊದಲಿಗೆ ಸೇವಾಧಾಮಕ್ಕೆ ಹೋಗಲು ಹಿಂದೇಟು ಹಾಕಿದರು.

ಅದೇ ಸಮಯದಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಗಾಲಿಕುರ್ಚಿ ವಿತರಿಸುವ ಕಾರ್ಯಕ್ರಮ ಆಯೋಜಿಸಲಾಗಿತ್ತು. ಕೃಷ್ಣ ಅವರೂ ಆ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಸೇವಾಧಾಮ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್ ಅವರು ಉಪಸ್ಥಿತರಿದ್ದರು. ಅವರ ಜೀವನದ ಅನುಭವಗಳು, ಮಾತಿನಲ್ಲಿದ್ದ ಆತ್ಮವಿಶ್ವಾಸ, ಸೇವಾಭಾವ ಹಾಗೂ ಹೋರಾಟದ ಮನೋಭಾವ ಕೃಷ್ಣ ಅವರ ಮನಸ್ಸಿನಲ್ಲಿ ಹೊಸ ಆಶಾಕಿರಣ ಮೂಡಿಸಿತು. **"ನಾನೂ ಬದುಕಿನಲ್ಲಿ ಏನಾದರೂ ಸಾಧಿಸಬೇಕು"** ಎಂಬ ಸಂಕಲ್ಪ ಅವರೊಳಗೆ ಬಲವಾಯಿತು.

ಕೊನೆಗೂ ಸೇವಾಧಾಮದ ಬಗ್ಗೆ ಸಂಪೂರ್ಣವಾಗಿ ತಿಳಿದುಕೊಂಡ ನಂತರ, 2023ರ ಫೆಬ್ರವರಿ 23ರಂದು ತಮ್ಮ ಅಣ್ಣನೊಂದಿಗೆ ಸೇವಾಧಾಮಕ್ಕೆ ಭೇಟಿ ನೀಡಿದರು.ಅಲ್ಲಿ ನಿರಂತರ ಫಿಸಿಯೋಥೆರಪಿ ಹಾಗೂ ಪುನಶ್ಚೇತನ ತರಬೇತಿ ಪಡೆದು ಕೇವಲ ಮೂರು ತಿಂಗಳಲ್ಲೇ ಬದಲಾವಣೆಯನ್ನು ಕಂಡರು. ಗಾಲಿಕುರ್ಚಿಯಲ್ಲಿಯೇ ತಮ್ಮ ದೈನಂದಿನ ಕೆಲಸಗಳನ್ನು ತಾವೇ ಮಾಡಿಕೊಳ್ಳುವಷ್ಟು ಆತ್ಮವಿಶ್ವಾಸ ಮತ್ತು ಸ್ವಾವಲಂಬನೆಯನ್ನು ಗಳಿಸಿದರು. ಇದು ಅವರ ಬದುಕಿನಲ್ಲಿ ಹೊಸ ಅಧ್ಯಾಯಕ್ಕೆ ನಾಂದಿ ಹಾಡಿತು. ಪುನಶ್ಚೇತನದ ನಂತರ ಮನೆಯಲ್ಲಿಯೇ ಕುಳಿತುಕೊಳ್ಳದೆ ಏನಾದರೂ ಸ್ವಂತ ಉದ್ಯೋಗ ಮಾಡಬೇಕು ಎಂಬ ದೃಢನಿಶ್ಚಯದಿಂದ ತಮ್ಮ ಅಣ್ಣನ ಸಹಾಯದೊಂದಿಗೆ ದನಗಳ ಖರೀದಿ ಮತ್ತು ಮಾರಾಟದ (ದಲಾಲಿ) ವ್ಯವಹಾರವನ್ನು ಆರಂಭಿಸಿದರು. ದನಗಳನ್ನು ಖರೀದಿಸಿ, ಅವುಗಳನ್ನು ಮನೆಯಲ್ಲಿಯೇ ಮನೆಯವರ ಸಹಾಯದಿಂದ ಆರೈಕೆ ಮಾಡುತ್ತಾ, ಸಾಕಲು ಬಯಸುವ ರೈತರಿಗೆ ಮಾರಾಟ ಮಾಡುವ ಮೂಲಕ ತಮ್ಮ ಜೀವನೋಪಾಯವನ್ನು ಕಟ್ಟಿಕೊಂಡಿದ್ದಾರೆ. ಕೃಷ್ಣ ರವರು ಸೇವಾಧಾಮದ ಸ್ವಯಂಸೇವಕರಾಗಿ ಸೇವೆ ಸಲ್ಲಿಸುತ್ತಿದ್ದು ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಸೇವಾಧಾಮದ ಪರಿಚಯ ಮಾಡಿಕೊಟ್ಟು, ಪುನಶ್ಚೇತನದ ಕುರಿತು ಅರಿವು ಮೂಡಿಸುತ್ತಾ, ಅವರಿಗೆ ಮಾರ್ಗದರ್ಶನ ಮತ್ತು ಅಗತ್ಯ ಸಹಾಯವನ್ನು ನೀಡುವ ಮೂಲಕ ಅನೇಕರ ಬದುಕಿನಲ್ಲಿ ಆಶಾಕಿರಣವಾಗಿದ್ದಾರೆ.

ಇಂದು ಕೃಷ್ಣ ಅವರ ಜೀವನವು ಕೇವಲ ಒಬ್ಬ ವ್ಯಕ್ತಿಯ ಬದುಕಿನ ಕಥೆಯಲ್ಲ; ಅದು ಆತ್ಮವಿಶ್ವಾಸ, ಪುನಶ್ಚೇತನ ಮತ್ತು ಛಲದ ಜೀವಂತ ಉದಾಹರಣೆಯಾಗಿದೆ. ಜೀವನದಲ್ಲಿ ಎಷ್ಟೇ ದೊಡ್ಡ ಸಂಕಷ್ಟ ಬಂದರೂ, ಸರಿಯಾದ ಮಾರ್ಗದರ್ಶನ, ಸೂಕ್ತ ಪುನಶ್ಚೇತನ ಹಾಗೂ ಅಚಲ ಮನೋಬಲ ಇದ್ದರೆ ಹೊಸ ಬದುಕನ್ನು ಕಟ್ಟಿಕೊಳ್ಳಬಹುದು ಎಂಬುದಕ್ಕೆ ಕೃಷ್ಣ ಅವರ ಜೀವನವೇ ಸಾಕ್ಷಿಯಾಗಿದೆ.

**ಶುಭಹಾರೈಸಲು ಸಂಪರ್ಕಿಸಿ : 70220 65949**